ಸಾಣೆಗುರುವನಹಳ್ಳಿ ಟ್ಯಾಂಕ್ ಏರಿಯಾದಲ್ಲಿ ಆಸ್ಪತ್ರೆಯನ್ನು ಕಟ್ಟುವ ಬಗ್ಗೆ.

೫೪೨. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರ ಕ್ಷೇತ್ರದ ನಿವಾಸಿಗಳು ಸಾಣೆಗುರುವನಹಳ್ಳಿ ಕೆರೆಯ ಅಂಗಳದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಮತ್ತು ಒಂದು ಕೆ ಎಸ್. ಆರ್. ಟಿ. ಸಿ. ಡಿಪೋವನ್ನು ಕಟ್ಟಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ಕ್ಷೇತ್ರದ ನಿವಾಸಿಗಳ ಕೋರಿಕೆಗಳನ್ನು ನೆರವೇರಿಸಲು ಸರ್ಕಾರವು ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಲಿರುವ ಕ್ರಮ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು) —

ಅ) ಕೆ. ಎಸ್. ಆರ್. ಟಿ. ಸಿ. ಯು ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸದರಿ ಪ್ರದೇಶದ ಸ್ವಲ್ಪ ಭಾಗವನ್ನು ಬಸ್ ಡಿಪೋವನ್ನು ನಿರ್ಮಿಸಲು ಕೋರಿರುತ್ತಾರೆ.

ಆಸ್ಪತ್ರೆ ನಿರ್ಮಾಣಕ್ಕಾಗಿ ಆರೋಗ್ಯ ಇಲಾಖೆಯಿಂದಾಗಲೀ ಸಾರ್ವಜನಿಕರಿಂದಾಗಲೀ ಮನವಿಗಳು ಬಂದಿರುವುದಿಲ್ಲ.

ಆ) ಅನುಮೋದಿತ ವ್ಯಾಪಕ ಅಭಿವೃದ್ಧಿ ಯೋಜನೆ ಪ್ರಕಾರ ಸದರಿ ಪ್ರದೇಶವು ಉದ್ಯಾನವನಕ್ಕಾಗಿ ಪ್ರಸ್ತಾವಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಉದ್ದೇಶಕ್ಕೆ ಬೇರೆ ಎಲ್ಲಿಯಾದರೂ ಸೂಕ್ತ ನಿವೇಶನಗಳನ್ನು ಹಂಚಿಕೆ ಮಾಡಲು ಪರಿಗಣಿಸುವುದು.

PRESENTATION OF PETITIONS

SRI K. KUSHALA.—I present the following petitions. i) Inclusion of Mariyaniand Kolayan sub-castes of yadava Community under Backward Tribes who live in Dakshina Kannada and Kodagu Districts.

ii) Construction of Bridge on Balnadu River at Aranthidu Kukkumbali in Sullia Taluk, Dakshina Kannada District

MR. SPKEAKER.—Petitions presented.

ಗಮನ ಸೆಳೆಯುವ ಸೂಚನೆ

ಸ್ಟೈಫೆಂಡರಿ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ರಾಜ್ಯದಲ್ಲಿ ಸ್ಟೈಫಂಡರೀ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ ದಿನಾಂಕ ೨೫ನೇ ಆಗಸ್ಟ್ ೧೯೮೬ ರಂದು ಸ್ಟೈಫಂಡರೀ ಪದವೀಧರರು ಬೆಂಗಳೂರಿಗೆ ಬಂದು ಮೆರವಣಿಗೆ ನಡೆಸಿ ಮತ್ತು ಧರಣಿ ಮಾಡುತ್ತಿದ್ದಾರೆ. ಅವರ ಕುಟುಂಬದವರಿಗೆ ಕೆಲಸವನ್ನು ಕೊಡಿಸಬೇಕೆಂದು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಖಾತೆ ಸಚಿವರು).—. ಮಾನ್ಯ ಅಧ್ಯಕ್ಷರೆ, ಸ್ಟೈಫಂಡರೀ ಉದ್ಯೋಗ ಯೋಜನೆಯು ರಾಜ್ಯದಲ್ಲಿ ಜನವರಿ ೧೯೭೭ ರಿಂದ ಹಮ್ಮಿಕೊಂಡು ಜಾರಿಗೊಳಿಸಲಾಯಿತು. ಕುಟುಂಬದಲ್ಲಿ ಯಾರೂ ಸಂಪಾದಿಸುವ ಸದಸ್ಯರೂ ಇಲ್ಲದ ಹಾಗೂ ಕುಟುಂಬದ ವಾರ್ಷಿಕ ವರಮಾನ ೩,೬೦೦ ರೂ.ಗಳಿಗೂ ಕಮ್ಮಿ ಇರುವ ಕುಟುಂಬದ ಯಾರಾದರೂ ಪದವೀಧರ, ಸ್ನಾತಕೋತ್ತರ ಪದವೀಧರ ಅಥವಾ ಡಿಪ್ಲೋಮಾ ಪಡೆದ ಅಭ್ಯರ್ಥಿಗಳಿಗೆ

ಮಾಹೆಯಾನ ರೂ. ೧೫೦ ರಂತೆ ಮಿತವೇತನ/ಸ್ಟೈಫಂಡ್‌ನ ಆಧಾರದ ಮೇಲೆ ನೇಮಿಸಿಕೊಳ್ಳಲಾಯಿತು. ಸ್ಟೈಫಂಡರಿಗಳ ಕೋರಿಕೆಯ ಮೇರೆಗೆ ಸ್ಟೈಫಂಡನ್ನು ಫೆಬ್ರುವರಿ ೧೯೮೧ ರಿಂದ ಮಾಹೆಯಾನ ರೂ. ೨೦೦ಕ್ಕೆ ಫೆಬ್ರುವರಿ ೧೯೮೪ ರಿಂದ ಮಾಹೆಯಾನ ರೂ. ೩೦೦ ಕ್ಕೆ ಮತ್ತು ಡಿಸೆಂಬರ್ ೧೯೮೪ ರಿಂದ ಮಾಹೆಯಾನ ರೂ. ೪೯೦ ಕ್ಕೆ ಹೆಚ್ಚಿಸಲಾಗಿದೆ. ಇದಲ್ಲದೆ ಮಾಸಿಕ ಪ್ರವಾಸ ಭತ್ಯೆ ರೂ. ೫೦ನ್ನು ಅವರ ಕೆಲಸ ಓಡಾಡುವಂಥಹುದಾದರೆ ಕೊಡಲಾಗುತ್ತಿದೆ. ಈ ಹೆಚ್ಚುವರಿಕೆಯಿಂದ ಬೊಕ್ಕಸಕ್ಕೆ ವರ್ಷಕ್ಕೆ ಕನಿಷ್ಠ ರೂ. ೫೦೦ ಲಕ್ಷ ಖರ್ಚಾಗುತ್ತಿದೆ

ಸ್ಟೈಫಂಡರೀ ಪದವೀಧರರು ತಮ್ಮನ್ನು ಸರ್ಕಾರಿ ಸೇವೆಯಲ್ಲಿ ಖಾಯಂ ಉದ್ಯೋಗಿಗಳಂತೆ ಮಾಡಲು ಸರ್ಕಾರವನ್ನು ಒತ್ತಾಯಿಸುತ್ತಲೇ ಇದ್ದಾರೆ. ಆದ್ದರಿಂದ, ಅವರನ್ನು ಖಾಯಂ ಮಾಡುವ ವಿಚಾರದಲ್ಲಿ ಸರ್ಕಾರವು ಕರ್ನಾಟಕ ನಾಗರೀಕ (ವಿಶೇಷ) ಸೇವಾ ನಿಯಮಾವಳಿಗಳು, ೧೯೮೭ ನ್ನು ಹೊರಡಿಸಿದೆ. ಈ ನಿಯಮಾವಳಿಗಳ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗ್ರೂಪ್ 'ಸಿ' ಹುದ್ದೆಗಳಲ್ಲಿ ಶೇಕಡ ೫೦ ರಷ್ಟು ಹುದ್ದೆಗಳನ್ನು ಸ್ಟೈಫಂಡರಿ ಪದವೀಧರರಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಕಾದಿರಿಸಲು ಮತ್ತು ವಯೋಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಆದ್ದರಿಂದ, ಪ್ರಾರಂಭದಲ್ಲಿ ಸ್ಟೈಫಂಡರೀ ಪದವೀಧರರ ಸಂಖ್ಯೆ ೧೪,೨೬೩ ಇದ್ದದ್ದು ಈಗ ೯,೦೧೯ಕ್ಕೆ ಇಳಿದಿದೆ.

ಎಲ್ಲಾ ಸ್ಟೈಫಂಡರೀ ಪದವೀಧರರನ್ನು ಏಕಕಾಲದಲ್ಲಿ ಖಾಯಂ ಮಾಡುವುದು ಎಂದರೆ ಅವರ ಸೇವೆಯನ್ನು ನೇರ ವಿಲೀನ ಅಥವಾ ಸ್ವಯಂಚಾಲಿತವಾಗಿ (ಆಟೋಮ್ಯಾಟಿಕ್) ನಿಯತಗೊಳಿಸುವಿಕೆಯು ನ್ಯಾಯಾಲಯಗಳು ನೀಡಿರುವ ಅನೇಕ ತೀರ್ಪುಗಳಿಗೆ ವಿರುದ್ಧವಾಗಿದೆ. ಏಕೆಂದರೆ, ಇದು ನೇಮಕಾತಿ ನಿಯಮಗಳಲ್ಲಿ ಹೇಳದ ಮತ್ತು ಒಪ್ಪಿಕೊಳ್ಳದ ಕ್ರಮ. ಈ ದಿಶೆಯಲ್ಲಿ ಸುಪ್ರೀಂ ಕೋರ್ಟಿಗೆ ಆರ್. ಎನ್. ನಂಜುಂಡಪ್ಪ ವಿರುದ್ಧ ಟಿ. ತಿಮ್ಮಯ್ಯ, —೧೯೭೨-ಎಸ್.ಎಲ್.ಆರ್. ಮತ್ತು ರಾಜ್ಯ ಹೈಕೋರ್ಟಿನ ರಿಟ್ ಅರ್ಜಿ ಸಂಖ್ಯೆ ೨೬೬೫–೮೭, ಎಸ್. ವಿಶ್ವನಾಥ್ ವಿರುದ್ಧ ರಾಜ್ಯ ಪ್ರಕರಣಗಳನ್ನು ಗಮನಿಸಬಹುದು.

ಅಧಿಸೂಚನೆ ಸಂಖ್ಯೆ ಡಿಪಿಎಆರ್ ೪೯ ಎಸ್‌ಎಲ್‌ಸಿ ೮೪ (೧೧), ದಿನಾಂಕ ೨ನೇ ಜುಲೈ ೧೯೮೬ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸ್ಥಳೀಯ ಅಭ್ಯರ್ಥಿಗಳ ವಿಶೇಷ ನೇಮಕ ಭರ್ತಿ) ನಿಯಮಾವಳಿಗಳು, ೧೯೮೬ರ ಪ್ರಕಾರ ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಕ್ರಮಬದ್ಧಗೊಳಿಸಲಾಗಿದೆ. ಇಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ನಿರ್ಮಿತವಾದ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ನೇಮಿಸಿಕೊಂಡಿದ್ದರಿಂದ ಹೊಸ ಹುದ್ದೆಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ಸ್ಟೈಫಂಡರೀ ಪದವೀಧರರನ್ನು ಸ್ಟೈಫಂಡ್ ಆಧಾರದ ಮೇಲೆ ಸ್ಟೈಫಂಡರೀ ಉದ್ಯೋಗ ಯೋಜನೆಯ ಪ್ರಕಾರ ನೇಮಿಸಿಕೊಂಡಿದ್ದು, ಈ ಯೋಜನೆಯಡಿ ಯಾವುದೇ ಹುದ್ದೆಗಳನ್ನು ನಿರ್ಮಿಸಿಲ್ಲ ಹಾಗೂ ಸ್ಟೈಫಂಡರೀ ಪದವೀಧರರು ಯಾವುದೇ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಆದ ಕಾರಣ ಎಲ್ಲಾ ಸ್ಟೈಫಂಡರೀ ಪದವೀಧರರನ್ನು ಏಕಕಾಲದಲ್ಲಿ ಖಾಯಂಗೊಳಿಸಲು ಸಾಧ್ಯವಾಗಲಾರದು.

ಪ್ರತಿಯೊಬ್ಬ ಸ್ಟೈಫಂಡರೀ ಪದವೀಧರರು ಕರ್ನಾಟಕ ನಾಗರೀಕ ಸೇವಾ (ವಿಶೇಷ) ನಿಯಮಾವಳಿಗಳು, ೧೯೮೭ರ ಪ್ರಯೋಜನ ಪಡೆದು ಖಾಯಂ ಹುದ್ದೆಗೆ ಸೇರಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅದಕ್ಕೆ ಅನುಕೂಲವಾಗುವಂತೆ, ಈಗ ಸದರೀ ನಿಯಮದಲ್ಲಿ ವಯೋಮಿತಿಯ ಬಗ್ಗೆ ಇವರಿಗೆ ತೋರಿಸುವ ರಿಯಾಯಿತಿಯನ್ನು ೫ (ಐದು) ವರ್ಷಗಳಿಂದ ಒಟ್ಟು ಹತ್ತು (೧೦) ವರ್ಷಗಳಿಗೆ ವಿಸ್ತರಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಸದರೀ ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿಯನ್ನು ಇಷ್ಟರಲ್ಲಿಯೇ ಹೊರಡಿಸಲಾಗುವುದು. ಈ ಪರಿಸ್ಥಿತಿಯ ಕಾರಣ, ಸ್ಟೈಫಂಡರೀ ಪದವೀಧರರು ಖಾಯಂಗೊಳಿಸುವ ಬಗ್ಗೆ ಮುಷ್ಕರ, ಧರಣಿ, ಪ್ರತಿಭಟನೆ. ಇತ್ಯಾದಿಗಳನ್ನು ನಡೆಸುವುದು ನ್ಯಾಯಸಮ್ಮತವಲ್ಲ ಮತ್ತು ಸ್ಟೈಫಂಡರೀ ಪದವೀಧರರು ಈ ರೀತಿ ಅನುಚಿತ ಕ್ರಮಗಳನ್ನು ಅನುಸರಿಸದಂತೆ ಎಚ್ಚರಿಕೆ ನೀಡುವ ಪರಿಸ್ಥಿತಿ ಬಂದಿದೆ. ಈ ವಿಚಾರದಲ್ಲಿ ಎಲ್ಲ ಸ್ಟೈಫಂಡರಿ ನೌಕರರನ್ನೂ ಖಾಯಂ ಆಗಿ ಮುಂದುವರಿಸಬೇಕೆಂಬ ಮನಸ್ಸು ನಮ್ಮ ಸರ್ಕಾರಕ್ಕಿದೆ. ಆದರೆ ಇದರಲ್ಲಿ ಸ್ವಲ್ಪ ಕಾನೂನಿನ ತೊಡಕಿದೆ. ನ್ಯಾಯಾಂಗದ ತೊಂದರೆ ಅಡ್ಡಬಂದಿದೆ ಇವರನ್ನು ಖಾಯಂ ಮಾಡುವಾಗ ಮೀಸಲಾತಿಯನ್ನು ಅನುಸರಿಸಬೇಕಾಗುತ್ತದೆ. ಇದೆಲ್ಲಾ ಇರುವುದರಿಂದ ಇವರನ್ನು ಯಾವರೀತಿ ಖಾಯಂ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ಇತ್ತೀಚೆಗೆ ಮಾನ್ಯ ವೆಂಕಟರಾಮಯ್ಯನವರು ಪಂಡಿತರ ಸದಸ್ಯರ

ಜೊತೆ ಚರ್ಚೆ ಮಾಡಿದ್ದಾರೆ. ಕಾನೂನು ಇಲಾಖೆಯ ಸಲಹೆಯನ್ನು ಪಡೆದು ಯಾವರೀತಿ ಇವರನ್ನು ಖಾಯಂ ಮಾಡಬೇಕೆಂದು ಯೋಚಿಸಿ ಅದರ ಪ್ರಕಾರ ಖಾಯಂ ಮಾಡಲು ಪ್ರಯತ್ನ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಪದೇ ಪದೇ ಇವರು ಚಳುವಳಿಯನ್ನು ಮಾಡುವುದು, ಮೆರವಣಿಗೆಯನ್ನು ಮಾಡುವುದು ಸರಿಯಲ್ಲ. ಏಕೆಂದರೆ, ಈಗ ಇವರು ಸರ್ಕಾರಿ ನೌಕರರು. ಜವಾಬ್ದಾರಿ ಸ್ಥಾನದಲ್ಲಿರುವವರಾದ್ದರಿಂದ ಇವರಲ್ಲಿ ಶಿಸ್ತು ಇರಬೇಕಾದುದು ಅವಶ್ಯಕ. ಇವರನ್ನು ಖಾಯಂ ಮಾಡಬೇಕೆಂಬ ಮನಸ್ಸು ನಮ್ಮ ಸರ್ಕಾರಕ್ಕಿದೆ. ಆದರೆ ಇವರನ್ನು ಮನೆಗೆ ಕಳುಹಿಸಬೇಕೆಂಬ ಇಚ್ಛೆ ನಮಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಕಳೆದ ೯ ವರ್ಷದಿಂದ ಇವರು ಇದೇರೀತಿ ದುಡಿದು ಕೊಂಡು ಬರುತ್ತಿದ್ದಾರೆ. ತಮ್ಮನ್ನು ಖಾಯಂ ಮಾಡಬೇಕೆಂದು ಇವರು ಹಿಂದಿನ ಮುಖ್ಯಮಂತ್ರಿಗಳಾದ ಗುಂಡೂರಾಯರಿಗೆ ಗದೆಯನ್ನು ಕೊಟ್ಟಿದ್ದೂ ತುಲಾಭಾರ ಮಾಡಿದ್ದೂ ಎಲ್ಲಾ ಆಯಿತು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕಳೆದ ೯ ವರ್ಷದಿಂದ ಹೀಗೆ ಕೇಳುತ್ತಲೇ ಬಂದಿದ್ದಾರೆ ಈಗ ನೀವು ಅವರಿಗೆ ತಿಂಗಳಿಗೆ ೯೯೦ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಸಾಮಾನ್ಯವಾಗಿ ಇವರೆಲ್ಲರಿಗೂ ಮದುವೆಯಾಗಿ ೨-೩ ಮಕ್ಕಳಾಗಿವೆ. ಸಂಸಾರ ನಡೆಸುವುದು ಕಷ್ಟವಾಗಿರುವಾಗ ನೀವು ಚಳುವಳಿ ಮಾಡಬಾರದೆಂದು ಹೇಳುತ್ತಿದ್ದೀರಿ. ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ, ಹೇಗಾದರೂ ಮಾಡಿ ನಿಮ್ಮನ್ನು ನಾವು ಖಾಯಂ ಮಾಡುತ್ತೇವೆ ಎಂದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಭರವಸೆಯನ್ನು ತಾವು ಈಡೇರಿಸಬೇಕು. ಈ ಸ್ಟೈಫೆಂಡರಿಯವರ ಸಮಸ್ಯೆ ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲೂ ಕೂಡ ಇದೇ ಪರಿಸ್ಥಿತಿ ಇತ್ತು. ಆಗ ಹಾಲಿ ಜಾರಿಯಲ್ಲಿದ್ದಂಥ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಬದಲಾವಣೆ ಮಾಡಿ ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಅವರನ್ನೆಲ್ಲಾ ಖಾಯಂ ಮಾಡಿದ್ದಾರೆ. ಆದರೆ ಇಲ್ಲಿ ನೀವು ಹೈಕೋರ್ಟ್ ಆರ್ಡರನ್ನು ರೆಫರ್ ಮಾಡುತ್ತೀರಿ. ಹೈಕೋರ್ಟ್‌ನಲ್ಲಿ ಒಂದು ವಿಚಾರ ಏನು ಬರುತ್ತದೆಂದರೆ, ವಿದ್ಯಾಸಲಾತಿಯನ್ನು ಅನುಸರಿಸಬೇಕು ಎಂಬುದು. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುವುದೇನೆಂದರೆ, ಈಗ ಏನು ೯ ಸಾವಿರ ಚಿಲ್ಲರೆ ಜನರು ಏನಿದ್ದಾರೆ ಇವರನ್ನೆಲ್ಲಾ ತಾವು ದಯವಿಟ್ಟು ಮೊದಲು ಖಾಯಂ ಮಾಡಿ. ಇದನ್ನೆಲ್ಲಾ ಮಾಡಿದಮೇಲೂ ಕೂಡ ಇನ್ನೂ ೨೭ ಸಾವಿರ ಹುದ್ದೆಗಳು ಖಾಲಿ ಇರುತ್ತವೆ. ಸ್ಟೈಫೆಂಡರಿಯವರನ್ನು ಖಾಯಂ ಮಾಡುವಾಗ ಮೀಸಲಾತಿ ಏನು ಅನುಸರಿಸಬೇಕಾಗಿರುತ್ತದೆ ಅದನ್ನು ಈ ೨೭ ಸಾವಿರ ಹುದ್ದೆಗಳನು ತುಂಬುವಾಗ ಅಲ್ಲಿ ಹೆಚ್ಚಿನ ಮೀಸಲಾತಿಯನ್ನು ತೆಗೆದುಕೊಳ್ಳಿ......

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಬೇಕುಬೇಕಾದಂತೆ ಮಾಡಿಕೊಳ್ಳುತ್ತೀರಾ ?

ಅಧ್ಯಕ್ಷರು.—ನೀವು ಏತಕ್ಕೆ ಕೂತು ಮಾತನಾಡುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಮೀಸಲಾತಿಯನ್ನು ಈಗ ಏನು ಕೊರತೆ ಬೀಳುತ್ತದೆ ಮುಂದೆ ೨೭ ಸಾವಿರ ಹುದ್ದೆಗಳನ್ನು ಭರ್ತಿ ಮಾಡುವಾಗ ಸರಿದೂಗಿಸಿಕೊಳ್ಳಲಿ. ಇತ್ತೀಚೆಗೆ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಲೋಕೋಪಯೋಗಿ ಇಲಾಖೆಯಲ್ಲಿ ಖಾಯಂ ಮಾಡಿದ್ದಾರೆ. ಅದೇರೀತಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಬಂದ ಸ್ಕೂಲ್ ಟೀಚರ್ಸ್‌ನ್ನೂ ಖಾಯಂ ಮಾಡಿದ್ದಾರೆ. ಆದ್ದರಿಂದ ನಾನಾವರೂ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಸ್ಟೈಪೆಂಡರಿಯವರು ಈಗ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೋ ಅಲ್ಲಲ್ಲಾ ಇವರ ಅವಶ್ಯಕತೆ ಇರುವುದರಿಂದ ಅಲ್ಲಲ್ಲಿಯೇ ಇವರನ್ನು ಖಾಯಂ ಮಾಡಬೇಕು. ಆದರೆ ಇದನ್ನು ಯಾವುದೇ ಕಾರಣದಿಂದಲೂ ತಾವು ನಿಧಾನ ಮಾಡಬಾರದು. ತಮಗೆ ಅವಶ್ಯಕವೆಂದು ಕಂಡುಬಂದರೆ ಲೀಗಲ್ ಒಪಿನಿಯನ್ ತೆಗೆದುಕೊಳ್ಳಿ. ಈಗಾಗಲೇ ಇಂಥ ಸಮಸ್ಯೆಯನ್ನು ಆಂಧ್ರ ಮತ್ತು ಹರ್ಯಾಣ ರಾಜ್ಯದವರು ಮಾಡಿರುವುದರಿಂದ ನೀವೂ ಕೂಡ ಇವರನ್ನು ಖಾಯಂ ಮಾಡಬಹುದು. ತಾವು ನಿರ್ದಿಷ್ಟವಾದ ಒಂದು ಭರವಸೆಯನ್ನು ನಮಗೆ ಈಗ ನೀಡಬೇಕು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಈಗಾಗಲೇ ಹೇಳಿದಂತೆ ಈ ಸ್ಟೈಪೆಂಡರಿ ಪದವೀಧರರು ಕಳೆದ ೯ ವರ್ಷಗಳಿಂದಲೂ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಲೇ ಬರುತ್ತಿದ್ದಾರೆ. ಬಹಳ ಹಿಂದಿನಿಂದಲೂ ಈ ಒಂದು ಸಮಸ್ಯೆ ಇದೆ. ಈಗ

ಉತ್ತರ ನೀಡಿದಂಥ ಮಾನ್ಯ ಸಚಿವ ಬೊಮ್ಮಾಯಿಯವರು ಹಿಂದೆ ಈ ಕಡೆ ಇದ್ದಾಗ ಈ ಸ್ಟೈಪೆಂಡರಿ ಪದವೀಧರರನ್ನು ಖಾಯಂ ಮಾಡಬೇಕೆಂದು ಮಾತನಾಡಿದ್ದರು. ಈಗ ಇವರ ಮಂತ್ರಿಮಂಡಲ ಬಹಳ ಹುರುಪು ಮತ್ತು ಉತ್ಸಾಹದಿಂದ ಕೂಡಿದೆ. ಸ್ಟೈಪೆಂಡರಿಯವರು ಹೊಸದಾಗಿ ಏನೂ ನೌಕರಿಯನ್ನು ಕೇಳುತ್ತಿಲ್ಲ. ಕಳೆದ ೯ ವರ್ಷದಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರು ಕೇಳುತ್ತಿರುವುದು ತಮ್ಮನ್ನು ಖಾಯಂ ಮಾಡಿ ಎಂದು. ನೀವು ಅವರನ್ನು ಖಾಯಂ ಮಾಡಿದರೆ ಅವರ ಜೀವನಕ್ಕೆ ಅನುಕೂಲ ವಾಗುತ್ತದೆ. ಏಕೆಂದರೆ ಅವರಿಗೆ ಮದುವೆಯಾಗಿರುವುದರಿಂದ ಮಕ್ಕಳು, ಮರಿ, ಆಗಿ ಸಂಸಾರ ದೊಡ್ಡದಾಗಿರುತ್ತದೆ. ಇದೆಲ್ಲಾ ತಮಗೆ ಗೊತ್ತಿರುವುದರಿಂದ ಮುಂದೆ ಕಾನೂನು ತೊಡಕು ಬಂದಾಗ ಅದನ್ನು ಬಗೆಹರಿಸಿಕೊಳ್ಳಲು ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಬಹುದು. ಈಗಾಗಲೇ ಆಂಧ್ರ ಮತ್ತು ಹರ್‍ಯಾಣ ರಾಜ್ಯಗಳಲ್ಲಿ ಇಂಥ ಸಮಸ್ಯೆಯನ್ನು ಬಗೆಹರಿಸಿರುವುದರಿಂದ ಅದೇ ವ್ಯವಸ್ಥೆಯನ್ನೇ ಇಲ್ಲಿಯೂ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಆದ್ದರಿಂದ ಮಾನ್ಯ ಮಂತ್ರಿಗಳು ದೃಢವಾದ ಮನಸ್ಸಿನಿಂದ ಆ ಜನರಿಗೆ ಉಪಕಾರವನ್ನು ಮಾಡ ಬೇಕು. ಅವರ ಜೀವನವನ್ನು ಉತ್ತಮಪಡಿಸಬೇಕು ಮತ್ತು ಅವರಿಂದ ಒಳ್ಳೆಯ ಕೆಲಸವನ್ನು ಪಡೆಯಬೇಕು ಎಂಬ ಮನಸ್ಸಿದ್ದರೆ ಅವರನ್ನು ಖಾಯಂ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇ ವೆಂಬ ಭರವಸೆಯನ್ನು ತಾವು ಕೊಡಬೇಕು. ಅವರು ಎಷ್ಟೋ ದೂರದಿಂದ ಇಲ್ಲಿಗೆ ಬಂದು ಮೂರು ದಿವಸಗಳಿಂದಲೂ ಉಪವಾಸ ಮಾಡುತ್ತಿದ್ದಾರೆ. ದಯವಿಟ್ಟು ಈ ಸದನದಲ್ಲಿ ಈ ದಿವಸವೇ ತಾವು ಅವರುಗಳನ್ನೆಲ್ಲಾ ಖಾಯಂ ಮಾಡುತ್ತೇವೆ ಎನ್ನುವ ನಿರ್ದಿಷ್ಟವಾದ ಒಂದು ಭರವಸೆಯನ್ನು ಕೊಡ ಬೇಕೆಂದು ಒಂಭತ್ತುಸಾವಿರ ಜನರ ಪರವಾಗಿ ಮಾನ್ಯ ಮಂತ್ರಿಗಳವರಲ್ಲಿ ನಾನು ವಿನಂತಿ ಮಾಡಿಕೊಳ್ಳು ತ್ತೇನೆ.

ಶ್ರೀ ಹಿಂಡಸಗೇರಿ ಅಬ್ದುಲ್ ಹಕಿಂ ಮಹಮದ್ ಗೌಸ್.—ಮಾನ್ಯ ಅಧ್ಯಕ್ಷರೇ, ಸ್ಟೈಫೇಡರಿ ಪದವೀಧರರಲ್ಲಿ ಬಹಳಜನ ಬಡವರಿದ್ದಾರೆ. ಒಂಬತ್ತು ವರ್ಷಗಳಿಂದ ಅವರು ಸರ್ಕಾರದಲ್ಲಿ ಕೆಲಸ ಮಾಡುತ್ತಿರುತ್ತಾರೆ. ರಾಜ್ಯ ಸರ್ಕಾರದಲ್ಲಿ ೨೭ಸಾವಿರ ಹುದ್ದೆಗಳು ಖಾಲಿ ಇರುತ್ತದೆಂದು ತಿಳಿದುಬಂದಿ ರುತ್ತದೆ. ಆದಂದರಿಂದ ಆ ಜಾಗಗಳನ್ನು ತುಂಬಲು ಇವರನ್ನೇ ತೆಗೆದುಕೊಳ್ಳಬೇಕೆಂದು ಮಾನ್ಯಮಂತ್ರಿ ಗಳವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

SRI VEERAKUMAR APATIL.—Sir, these stipendary graduates have been urging for regularisation of their services from the last nine years. There are many vacancies in the Government for SCs/STs and others. I request the Government to fill up th-se vacancies immediately .

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಈ ಸ್ಟೈಪೆಂಡರಿ ಗ್ರಾಜುಯೇಟ್ಸನ್ನು ನೇಮಕ ಮಾಡಿಕೊಂಡದ್ದು ೧೫೦ ರೂಪಾಯಿಗಳ ಸಂಬಳದಮೇಲೆ. ಈಗ ನಾಲ್ಕುನೂರು ರೂಪಾಯಿ ಗಳಿಗೆ ಬಂದುನಿಂತಿದೆ. ಸರ್ಕಾರಿ ನೌಕರಿಯಲ್ಲಿ ಸುಮಾರು ೨೫-೩೦ ಸಾವಿರ ಜನ ಸ್ಟೈಪೆಂಡರಿ ಗ್ರಾಜುಯೇಟ್ಸ್ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಈ ರೀತಿ ೯ ವರ್ಷಗಳು ಕಳೆದು ಹೋಯಿತು. ಈವತ್ತು ವಿನಂತಿ ಮಾಡಿಕೊಳ್ಳುತ್ತೇನೆ ವಿಧಾನಮಂಡಲದಲ್ಲಿ ಯಾವುದಕ್ಕೂ ಕಾನೂನು ಮಾಡಲು ಅವಕಾಶವಿರುತ್ತದೆ. ಇವರನ್ನು ಖಾಯಂ ಮಾಡಲು ಹೈಕೋರ್ಟಿನಿಂದ ಆದೇಶ ಕೂಡ ಕೊಟ್ಟಿರುತ್ತಾರೆ. ಆದ್ದರಿಂದ ಇವರನ್ನು ಖಾಯಂ ಮಾಡಲು ಸಾಧ್ಯವಿರುತ್ತದೆ. ಮಾನವೀಯತೆಯ ದೃಷ್ಟಿಯಿಂದ ಇವರ ಬಗ್ಗೆ ಯೋಚನೆ ಮಾಡಿ. ಈ ಪರಿಸ್ಥಿತಿ ಏತಕ್ಕಾಗಿ ಬಂದಿರುತ್ತದೆಂದು ಯೋಚನೆ ಮಾಡಿ ಈವತ್ತಿನ ಪರಿಸ್ಥಿತಿಯಲ್ಲಿ ಅವರು ಜೀವನಮಾಡಲು ಬಹಳ ಕಷ್ಟವಿರುತ್ತದೆ. ಬೇರೆ ನೌಕರರನ್ನು ನೇಮಕ ಮಾಡಿಕೊಳ್ಳುವ ಬದಲಾಗಿ ಸ್ಟೈಪೆಂಡರಿ ಗ್ರಾಜುಯೇಟ್ಸನ್ನು ನೇಮಕ ಮಾಡಿಕೊಳ್ಳಿ ಎಂದು ಹೈಕೋರ್ಟಿನ ಸ್ಪಷ್ಟವಾದ ತೀರ್ಮಾನವಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗಲೂ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆಂದು ನಿನ್ನೆ ಅವರ ಪ್ರಮುಖರ ಜೊತೆ ಯಲ್ಲಿ ಹೇಳಿರುತ್ತಾರೆ. ಎಫ್.ಡಿ.ಸಿ.ಗೆ ೬೩೦ ರೂಪಾಯಿ ಸಂಬಳವನ್ನು ಕೊಡುತ್ತಿರುವಾಗ ಇವರಿಗೂ ೬೩೦ ರೂಪಾಯಿಗಳನ್ನು ಕೊಡುತ್ತೇವೆಂದು ಈಗಲೇ ದಯವಿಟ್ಟು ಡಿಕ್ಲೇರ್ ಮಾಡಿ. ಮತ್ತೆ ಈವರ್ಷ

ಅಥವಾ ಮುಂದಿನ ವರ್ಷ ಅವರ ಹುದ್ದೆಗಳನ್ನು ಖಾಯಂಮಾಡಿ ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆನ್ನುವ ದೃಢ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನೀವು ಎಚ್ಚರಿಕೆಯನ್ನು ಕೊಟ್ಟರೆ ಅವರು ಎಲ್ಲಿಗೆ ಹೋಗಬೇಕು? ಅವರೇನು ಗಲಾಟೆ ಮಾಡಲಿಲ್ಲ ಚಳುವಳಿಯನ್ನು ಮಾಡಲಿಲ್ಲ ಕಬ್ಬನ್ ಪಾರ್ಕಿನಲ್ಲಿ ಉಪವಾಸ ಕುಳಿತು ೨೪ಜನ ಶಾಸಕರ ಗಮನವನ್ನು ಸೆಳೆದಿದ್ದಾರೆ. ಎಸ್‌ಸಿ/ಎಸ್.ಟಿಗೆ ಅನ್ಯಾಯ ಮಾಡಿ ಎಂದು ಹೇಳುತ್ತಿಲ್ಲ ರಿಕ್ರೂಟ್ ಮಾಡಿಕೊಂಡು ಸರ್ಕಾರ ತಪ್ಪುಮಾಡಿ ಆ ಆರೋಪವನ್ನು ಅವರಮೇಲೆ ಹೊರಿಸುವುದು ಬೇಡ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅವರಮೇಲೆ ತಪ್ಪು ಹೊರಿಸತಕ್ಕಂಥದ್ದು ಸರಿಯಾದುದಲ್ಲ. ದಯವಿಟ್ಟು ಕೊನೆಪಕ್ಷ ೪೨೦ ರೂಪಾಯಿಗಳಿಂದ ೬೦೦ ರೂಪಾಯಿಗಳಿಗೆ ಏರಿಸಲು ಲಾ ಡಿಪಾರ್ಟ್‌ಮೆಂಟ್‌ನೊಂದಿಗೆ ಚರ್ಚಿಸಿಮಾಡಿ ತೀರ್ಮಾನಕ್ಕೆ ಬರುತ್ತೇವೆಂದು ತಾವು ಹೇಳಿದ್ದೀರಿ. ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಸಂಬಳವನ್ನು ಜಾಸ್ತಿ ಮಾಡಬೇಕು. ಮತ್ತೆ ಖಾಯಂಗೊಳಿಸಲು ಪ್ರಾಮಾಣಿಕವಾದ ಪ್ರಯತ್ನ ಮಾಡಿ. ಇದಕ್ಕೆ ಕಾನೂನು ತೊಡಕಿದ್ದರೆ ಅದನ್ನು ಬದಲಾವಣೆ ಮಾಡತಕ್ಕ ಶಕ್ತಿ ಇಲ್ಲವೇ ಎಂದು ಕೇಳಬೇಕಾಗುತ್ತದೆ. ದಯವಿಟ್ಟು ಇದನ್ನು ಸರಿಯಾದ ರೀತಿಯಲ್ಲಿ ವಿಚಾರ ಮಾಡಿ ನ್ಯಾಯ ದೊರಕಿಸಿ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈವತ್ತು ನಾಲ್ಕು ಗಮನಸೆಳೆಯುವ ಸೂಚನೆಗಳನ್ನು ಇಟ್ಟಿದ್ದೇವೆ. ಪ್ರತಿಯೊಬ್ಬರಿಗೂ ಅವಕಾಶವನ್ನು ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಎಷ್ಟೋ ಜನರು ಹೆಸರುಗಳನ್ನು ಕಳುಹಿಸಿದ್ದರೂ ೫ ಮಂದಿಗೆ ಅವಕಾಶವನ್ನು ಮಾಡಿಕೊಡಬೇಕೆಂದು ರೂಲ್‌ನಲ್ಲಿ ಇದೆ. ಅದೇ ಪ್ರಕಾರವಾಗಿ ಶ್ರೀಯುತ ಆರ್ ವೆಂಕಟರಾಮಯ್ಯ, ಮಾನ್ಯ ಪಂಪಾಪತಿಯವರ ಬದಲಾಗಿ ಮಾನ್ಯ ಭೂಪತಿಯವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಇದ್ದಾರೆ. ಅವರೊಬ್ಬರಿಗೆ ಸ್ಪೆಷಲ್‌ಆಗಿ ಮಾತನಾಡಲು ಅವಕಾಶ ಕೊಡುತ್ತೇನೆ. ಅವರು ಹೇಳಲಿ.

ಶ್ರೀ ವೇದಾಂತ ಹೆಮ್ಮಿಗೆ.—ನಮಗೂ ಅವಕಾಶವನ್ನು ಕೊಡಬೇಕು

(ಗೊಂದಲ)

ಶ್ರೀ ಎಚ್.ಡಿ. ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆಯನ್ನು ಮಂಡಿಸಿರತಕ್ಕಂಥ ಶ್ರೀಮಾನ್ ವೆಂಕಟರಾಮಯ್ಯನವರು ಮತ್ತು ಇನ್ನಿತರ ಶಾಸಕರು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೋಗಿ ಈ ವಿಷಯದಲ್ಲಿ ಈಗಾಗಲೇ ಚರ್ಚೆಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಇಂದು ಈ ಸದನದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟಿರತಕ್ಕಂಥ ಹೇಳಿಕೆಗೂ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಆಶ್ವಾಸನೆಗೂ ಅರ್ಥಾತ್ ಸಂಬಂಧವಿಲ್ಲ. ಆದ್ದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳು ಇದರ ಬಗ್ಗೆ ಧೀರ್ಘವಾದ ವಿವರಣೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ೯ಸಾವಿರ ಜನ ನಿರುದ್ಯೋಗ ಪದವೀಧರರು ಏನು ಇದ್ದಾರೆ ಅವರು ತೆಗೆದುಕೊಂಡಂಥ ನಿಲುವು ಮೆಚ್ಚತಕ್ಕಂಥ ನಿಲುವಾಗಿರುತ್ತದೆ. ಇವತ್ತು ಸುಮಾರು ೯ಸಾವಿರ ಜನ ಬೀದಿಪಾಲಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಎಲ್ಲರೂ ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ನಾವು ಖಾಯಂ ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ನನಗೂ ಅವಕಾಶ ಕೊಡಿ ಅಧ್ಯಕ್ಷರೇ. ನಾನು ಕೂಡ ಸಹಿ ಮಾಡಿದ್ದೇನೆ.

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ. ಮಾನ್ಯ ಚೌಡಯ್ಯನವರು ಮೊದಲು ಮಾತನಾಡಿ ಮುಗಿಸಲಿ.

ಶ್ರೀ ಹೆಚ್. ಡಿ. ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದ ಉತ್ತರದಲ್ಲಿ ಏನು ಹೇಳಿದ್ದಾರೆ.

"......ಈ ನಿಯಮಾವಳಿಗಳ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಗ್ರೂಪ್ 'ಸಿ' ಹುದ್ದೆಗಳಲ್ಲಿ ಶೇಕಡಾ ೫೦ ರಷ್ಟು ಹುದ್ದೆಗಳನ್ನು ಸ್ಟೈಫೆಂಡರೀ ಪದವೀಧರರಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಕಾದಿರಿಸಲು ಮತ್ತು ವಯೋಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಆದ್ದರಿಂದ, ಪ್ರಾರಂಭದಲ್ಲಿ ಸ್ಟೈಫೆಂಡರೀ ಪದವೀಧರರ ಸಂಖ್ಯೆ ೧೪,೧೮೩ ಇದ್ದದ್ದು ಈಗ ೯,೮೯೯ಕ್ಕೆ ಇಳಿದಿದೆ"

ಇದು ಬರೀ ಹಾರಿಕೆಯ ಉತ್ತರ ಅಷ್ಟೆ. ಇದರಿಂದ ಏನೂ ಪ್ರಯೋಜನ ಆಗಲಿಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ಚೌಡಯ್ಯ.—ಇವರನ್ನು ಖಾಯಂಗೊಳಿಸುವುದಕ್ಕೆ ಸರ್ಕಾರ ನೇರವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ಚೆನ್ನಪ್ಪ.—ಇವತ್ತು ಏನು ಒಂಬತ್ತು ಸಾವಿರ ಜನ ಕಬ್ಬನ್ ಪಾರ್ಕಿನಲ್ಲಿ ಕೂತಿದ್ದಾರೆ. ಅವರ ಬಗ್ಗೆ ಕಳಕಳಿ ನಮಗೂ ಇದೆ. ಅವರನ್ನು ಖಾಯಂ ಮಾಡಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ.

(ಗೊಂದಲ)

ಶ್ರೀ ಹೆಚ್. ಜಿ. ಚೆನ್ನಪ್ಪ.—ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಿ......

(ಗೊಂದಲ)

ಶ್ರೀ ಹೆಚ್. ಜಿ. ಚೆನ್ನಪ್ಪ.—ಅವರನ್ನು ಬೀದಿ ಪಾಲು ಮಾಡಿದ್ದು ನೀವು .....

(ಗೊಂದಲ)

ಅಧ್ಯಕ್ಷರು.—ಈಗ ಶಾಣಪ್ಪನವರು ಮಾತನಾಡಲಿ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಒಂಬತ್ತು ವರ್ಷಗಳಿಂದ ಇದೆ. ಈಗ ಸರ್ಕಾರ ಕೊಟ್ಟ ಉತ್ತರದಲ್ಲಿ ಪ್ರತಿ ವರ್ಷ ೫ ಕೋಟಿ ಹೆಚ್ಚು ಖರ್ಚು ಮಾಡುತ್ತದೆ ಎಂದು ಹೇಳಿದ್ದಾರೆ. ವರ್ಷಕ್ಕೆ ೫ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ ಮತ್ತು ೧೫ ಸಾವಿರ ಇದ್ದ ಸಂಖ್ಯೆ ೯ ಸಾವಿರಕ್ಕೆ ಇಳಿದಿದೆ. ಮತ್ತೆ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಆದಷ್ಟು ಮಟ್ಟಿಗೆ ಅವರ ಹುದ್ದೆಗಳನ್ನು ಖಾಯಂ ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಆರ್. ವೆಂಕಟರಾಮಯ್ಯ ಮತ್ತು ಇತರರು ಹೋಗಿ ಕೇಳಿದಾಗ ಮಾನ್ಯ ಮುಖ್ಯ ಮಂತ್ರಿಯವರು ಇದರ ಬಗ್ಗೆ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಕೊಡಲಿಚ್ಛಿಸುವುದೇನೆಂದರೆ, ಸದನದ ಒಂದು ಕಮಿಟಿಯನ್ನು ಮಾಡಬೇಕು. ಸದನದ ಕಮಿಟಿಯನ್ನು ಮಾಡಿ ಅದು ಈ ಸ್ಟೈಫೆಂಡರಿ ಪದವೀಧರರ ಸಮಸ್ಯೆಯನ್ನು ಅರಿತು ಒಂದು ಅಥವಾ ಎರಡು ತಿಂಗಳಲ್ಲಿ ಇವರನ್ನು ಕನ್‌ಫರ್ಮ್ ಮಾಡುವುದಕ್ಕೆ ಏನು ಮಾಡಬೇಕೆಂದು ವರದಿಯನ್ನು ಕೊಡಬೇಕು. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಹೊರೆಬೀಳುತ್ತದೆ ಎಂಬುದು ನನಗೆ ಗೊತ್ತು. ಇದು ಏನೇ ಆದರೂ ಸೆಟಲ್‌ಮೆಂಟ್ ಮಾಡುತ್ತೇವೆ ಎನ್ನುವ ಎನ್ನುವ ಭರವಸೆಯನ್ನು ಕೊಡಿ. ಇದಕ್ಕೆ ಏನೇ ಹೊರೆ ಬಿದ್ದರೂ ಅದು ಸರ್ಕಾರವನ್ನು ನಡೆಸುವವರ ಜವಾಬ್ದಾರಿ. ಇವರ ಹೆಂಡತಿ ಮಕ್ಕಳ ಸಂರಕ್ಷಣೆ ಮಾಡುವ ಜವಾಬ್ದಾರಿ ನಿಮ್ಮದು. ಈ ಪ್ರಕಾರ ಮಾಡಬೇಕೇ ಹೊರತು ಈಗ ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಅದು ಸರಿಯಿಲ್ಲ. They have got a problem. You have to consider on the basis of humanitarian point of view. I hope you will settle it as early as possible.

ಅಧ್ಯಕ್ಷರು.—ಈಗ ಮಾನ್ಯ ಮೊಯಿಲಿಯವರು ಮಾತನಾಡಲಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾವು ಯಾರೂ ಮಾತನಾಡುವುದಿಲ್ಲ. ಅವರೇ ಮಾತನಾಡಲಿ. ಅವರ ಕೆಲಸವನ್ನು ಖಾಯಂ ಮಾಡಿಬಿಟ್ಟರೆ ಅಷ್ಟೇ ಸಾಕು ನಮಗೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ......

ಶ್ರೀ ಬಿ. ಆರ್. ನೀಲಕಂಠಪ್ಪ.—ಇವರು ಮಾತನಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಹಿಂದಿನ ಸರ್ಕಾರದಲ್ಲಿ ಇವರು ಅರ್ಥ ಸಚಿವರಾಗಿದ್ದರು. ಈಗ ಮಾತನಾಡಲಿಕ್ಕೆ ಇವರಿಗೆ ಯಾವ ನೈತಿಕ ಹಕ್ಕೂ ಇಲ್ಲ......

(ಗೊಂದಲ)

ಅಧ್ಯಕ್ಷರು.—ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಮಾನ್ಯ ನೀಲಕಂಠಪ್ಪನವರೇ, ನಿಮಗೂ ಸಹ ಅವಕಾಶ ಕೊಡುತ್ತೇನೆ. ಅರ್ಧತಾಸು ಹೆಚ್ಚಾದರೂ ಸರಿ. ನೀವೂ ಮಾತನಾಡಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಸ್ಟೈಫೆಂಡರಿಯರುವರನ್ನು ಖಾಯಂ ಮಾಡುವುದಕ್ಕೆ, ಆ ವಿಚಾರದಲ್ಲಿ ಸನ್ಮಾನ್ಯ ಸಚಿವರ ಹೇಳಿಕೆಯನ್ನು ನಾನು ಕೂಡ ನೋಡಿದ್ದೇನೆ. ಇದರ ಪ್ರಕಾರ ಹಿಂದೆ ಕಾಂಗ್ರೆಸ್ ಸರ್ಕಾರ ಇರಲಿ ಅಥವಾ ಈಗ ನಿಮ್ಮ ಸರ್ಕಾರವೇ ಇರಲಿ. ಎರಡೂ ಸರ್ಕಾರಗಳು ಕೂಡ ಒಂದು ಸ್ಪಷ್ಟವಾದಂಥ ನಿಲುವಿನಿಂದ ಇವರನ್ನು ಖಾಯಂ ಮಾಡಬೇಕೆಂದು ಘೋಷಣೆ ಮಾಡಿದೆ. ಮತ್ತು ನಿಮ್ಮ ಜನತಾ ಸರ್ಕಾರ ಬಂದಮೇಲೆ ಸಹ ಈ ಘೋಷಣೆ ಆಗಿದೆ ಇದು ನಿಶ್ಚಿತವಾದಂಥ ಸರ್ಕಾರದ ಧೋರಣೆ. ಇದರ ಬಗ್ಗೆ ಗೊಂದಲ ಇಲ್ಲ. ಇದರಲ್ಲಿ ನಿಮ್ಮ ರಾಜಕೀಯ ಇಲ್ಲ, ಅಥವಾ ನಮ್ಮ ರಾಜಕೀಯ ಇಲ್ಲ. ಈಗ ಪ್ರಶ್ನೆ ಇರತಕ್ಕದ್ದು ಇಷ್ಟೇ. ನಮ್ಮ ಕಾಲದಲ್ಲಿ ಮತ್ತು ನಿಮ್ಮ ಕಾಲದಲ್ಲಿ ಕೂಡ ಕೋರ್ಟಿನ ಕೆಲವು ತೊಂದರೆಗಳಿಂದ ಇವರನ್ನು ಖಾಯಂ ಮಾಡಲಿಕ್ಕೆ ಆಗಲಿಲ್ಲ. ಇದು ನಿಮಗೆ ಗೊತ್ತಿದೆ. ಈಗಲೂ ಕೂಡ ತಾವು ಹೇಳತಕ್ಕದ್ದು, ಕೋರ್ಟಿನ ಕೆಲವು ತೊಂದರೆಗಳು, ಅಡಚಣೆಗಳಿಂದ ಮತ್ತು ಕೆಲವು ಜಡ್ಜಮೆಂಟ್‌ಗಳಿಂದ ಖಾಯಂ ಮಾಡಲಿಕ್ಕೆ ಅಸಾಧ್ಯ ಆಯಿತು. ಈಗ ಸರ್ಕಾರ ಏನು ವಾದ ಹೇಳುತ್ತಿದ್ದಾರೆ ಎಂದರೆ, ಅದೇ ಕೋರ್ಟಿನ ಅಡಚಣೆ. ಪ್ರಶ್ನೆ ಉಳಿದಿದ್ದು ಇಷ್ಟೇ. ಕೊನೆಯ ಪ್ಯಾರಾಗ್ರಾಫ್ ನೋಡಬೇಕು......

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಬೇರೆ ಹೇಳಿದ್ದು ನೀವು ಕೇಳಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಇಲ್ಲೇ ಇದ್ದೆ. ಕೊನೆಯ ಪ್ಯಾರಾದಲ್ಲಿ ಹೇಳಿದ್ದಾರೆ.—

> "ಪ್ರತಿಯೊಬ್ಬ ಸ್ಟೈಪೆಂಡರೀ ಪದವೀಧರರು ಕರ್ನಾಟಕ ನಾಗರೀಕ ಸೇವಾ (ವಿಶೇಷ) ನಿಯಮಾವಳಿಗಳು, ೧೯೮೨ರ ಪ್ರಯೋಜನ ಪಡೆದು ಖಾಯಂ ಹುದ್ದೆಗೆ ಸೇರಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ"

ಈ ಉದ್ದೇಶದಿಂದಲೇ ೧೯೮೨ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಮಾಡಲಾಗಿತ್ತು.

೧-೩೦ ಪಿ. ಎಂ.

ಈಗ ನಾವು ೧೯೮೬ನೇ ಇಸವಿಯಲ್ಲಿದ್ದೇವೆ. ಇವರ ಬಗ್ಗೆ ಇಲ್ಲ ಏನನ್ನೋ ಹೇಳಿಬಿಟ್ಟರೆ ಅವರ ಹೊಟ್ಟೆ ತುಂಬುವುದಿಲ್ಲ. ೧೯೮೨ರಲ್ಲಿ ಜಾರಿಗೆ ತಂದ ಕಾನೂನನ್ನು ಇಲ್ಲಿಯವರೆಗೆ ಜಾರಿಗೆ ತರಲು ಏತಕ್ಕೆ ಸಾಧ್ಯವಾಗಲಿಲ್ಲ ಎಂಬುದೇ ಇಲ್ಲಿರುವಂತಹ ಮುಖ್ಯವಾದ ಪ್ರಶ್ನೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಸರ್ಕಾರದವರು ಇವರ ಬಗ್ಗೆ ತೋರಿಸಿದಂಥ ರಿಯಾಯಿತಿಗಳೆಂದರೆ, ವಯೋಮಿತಿಯ ಬಗ್ಗೆ ರಿಯಾಯಿತಿ ತೋರಿಸಿದ್ದಾರೆ ಮತ್ತು ಶೇಕಡಾವಾರು ಹುದ್ದೆಗಳನ್ನು ಇವರಿಗಾಗಿ ಹೆಚ್ಚು ಮಾಡಿದ್ದಾರೆ. ಈ ರೀತಿ ಶೇಕಡಾವಾರು ಹುದ್ದೆಗಳನ್ನು ಜಾಸ್ತಿ ವ ಮಾಡಿದಾಕ್ಷಣ ಇವರೆಲ್ಲರನ್ನೂ ಖಾಯಂಗೊಳಿಸಿದಂತೆ ಆಗುವುದಿಲ್ಲ. It is only enabling them to compete in the public employment market. ಇವರೆಲ್ಲರನ್ನೂ ಖಾಯಂ ಮಾಡಬೇಕಾದರೆ ಇನ್ನೂ ಎಷ್ಟು ವರ್ಷಗಳು ತಮಗೆ ಬೇಕಾಗುತ್ತದೆ ? ಕಳೆದ ನಾಲ್ಕು ವರ್ಷಗಳಲ್ಲಿ ಇವರ ಸಂಖ್ಯೆ ೧೪,೨೭೩ ಇದ್ದದ್ದು ಈಗ ೯,೦೧೯ಕ್ಕೆ ಇಳಿದಿದೆ ಇವರ ಪೈಕಿ ಎಷ್ಟು ಜನ ಸತ್ತು ಹೋಗಿದ್ದಾರೋ ಮತ್ತು ಬೇರೆ ಕಡೆಗಳಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡಿದ್ದಾರೋ ಗೊತ್ತಿಲ್ಲ. ಅದು ಪ್ರತ್ಯೇಕ ಪ್ರಶ್ನೆ. ಕಳೆದ ನಾಲ್ಕು ವರ್ಷಗಳಲ್ಲಿ ಇವರು ಎರಡು ಸಾವಿರ ಜನರ ಕೆಲಸವನ್ನು ಖಾಯಂ ಮಾಡಿದ್ದಾರೆ. ಇನ್ನುಳಿದ ೯ ಸಾವಿರ

ಚಿಲ್ಲರೆ ಜನರ ಕೆಲಸವನ್ನು ಖಾಯಂ ಮಾಡಲು ಇವರಿಗೆ ೮-೯ ವರ್ಷಗಳು ಬೇಕೆಂದು ಕಾಣುತ್ತದೆ. ಇವರ ಬಗ್ಗೆ ಸರ್ಕಾರಕ್ಕೆ ಸದುದ್ದೇಶ ಇದೆ ಎಂದೇ ನಾವು ತಿಳಿದುಕೊಳ್ಳೋಣ. ಆದರೆ ಈ ಒಂದು ಸದುದ್ದೇಶವನ್ನು ಸಾಧನೆ ಮಾಡಲು ನಿಮ್ಮ ಕೈಯಲ್ಲಿ ಏತಕ್ಕೆ ಆಗಲಿಲ್ಲ? ಇವರನ್ನು ಖಾಯಂಗೊಳಿಸುವ ಬಗ್ಗೆ ನಿಮ್ಮಲ್ಲಿ ಮೊದಲು ರಾಜಕೀಯ ಇಚ್ಛಾಶಕ್ತಿ ಅಂದರೆ political will power ಇರಬೇಕು, ಇಲ್ಲದಿದ್ದರೆ ಇವರ ಪ್ರಶ್ನೆ ಪರಿಹಾರವಾಗುವುದೇ ಇಲ್ಲ. ಈ ಕೆಲಸವನ್ನು ನೀವು ಅಧಿಕಾರಿಗಳಿಗೆ ಬಿಟ್ಟರೆ ಪರಿಹಾರ ಆಗುವುದಿಲ್ಲ. ಅವರನ್ನು ಕೇಳಿದರೆ ಕೆಲಸ ಖಾಲಿ ಇಲ್ಲ ಎಂದೇ ಹೇಳುತ್ತಾರೆ. Stipendiary posts are not substantive posts ಎಂದು ಅವರು ಹೇಳುತ್ತಾರೆ. ಈ ಕಾರಣದಿಂದ ಇವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ, ಆದ್ದರಿಂದ you create posts first and automatically these people will get the posts. ಇದನ್ನು ಮೊದಲು ಮಾಡಿ. ಇದಕ್ಕೆ ನಿಮ್ಮ ಅಧಿಕಾರಿಗಳಿಂದ ನಿಮಗೆ ಸಹಕಾರ ಸಿಗದಿದ್ದರೆ ಮಾನ್ಯ ಶಿವಪ್ಪನವರು ಹೇಳಿದಂತೆ ಈ ಎರಡೂ ಸದನಗಳ ಸದಸ್ಯರು ಇರುವಂತಹ ಒಂದು ಸಮಿತಿಯನ್ನು ನೇಮಕ ಮಾಡಿ. We will suggest you how to modify the rules which cannot be attacked by the court. ಆದ್ದರಿಂದ you create the posts. Once posts are created, you can give them subject to the reservations which has to be provided. ನೀವು ಕೆಲವು ಹುದ್ದೆಗಳನ್ನು ಕ್ರಿಯೇಟ್ ಮಾಡಿದರೆ ನಂತರ ಇವರಿಗೆ ಶೇಕಡಾ ೫೦ರಷ್ಟು ಸ್ಥಾನಗಳನ್ನು ಮೀಸಲಿಡುವುದಕ್ಕೆ ಸಾಧ್ಯವಾಗುವುದು. ಇವರು ಇದರ ಕಡೆಗೆ ಹೆಚ್ಚಿನ ಗಮನ ಕೊಡದೆ ೧೯೮೨ರಿಂದ ಇಲ್ಲಿಯವರೆಗೆ ಕೇವಲ ಸ್ಟೈಫಂಡನ್ನು ಮಾತ್ರ ಹೆಚ್ಚಿಸಿಕೊಂಡು ಬಂದಿದ್ದಾರೆ. ಇವರ ಕೆಲಸವನ್ನು ಖಾಯಂ ಮಾಡುವ ಬಗ್ಗೆ ದಿಟ್ಟ ಹೆಜ್ಜೆಯಿಡುವುದಕ್ಕೆ ಇವರ ಕೈಯಲ್ಲಿ ಸಾಧ್ಯವಾಗಲಿಲ್ಲ. ಈ ಪ್ರಶ್ನೆಯನ್ನು ಪರಿಹಾರ ಮಾಡಬೇಕಾದರೆ you have got to assert your political will over the bureaucracy. ಬ್ಯೂರೋಕ್ರಸಿಯ ಮೇಲೆ ನೀವು ಸವಾರಿ ಮಾಡುವುದನ್ನು ಕಲಿಯದಿದ್ದರೆ this problem will remain unsolved for ever. ಈ ಸಮಸ್ಯೆಗೆ ನೀವು ಏನಾದರೂ ಮಾಡಿ ಪರಿಹಾರ ಕಂಡು ಹಿಡಿಯಲೇಬೇಕು. ನೀವು ಈ ರೀತಿಯ ಹೇಳಿಕೆ ಕೊಟ್ಟರೆ, ಇದು ತೀರಾ ಗೊಂದಲಮಯ ಸಮಸ್ಯೆ ಆಗುತ್ತದೆಯೇ ಹೊರತು, ಇದಕ್ಕೆ ಯಾವ ಪರಿಹಾರವೂ ದೊರಕುವುದಿಲ್ಲ. ಇವರನ್ನು ಖಾಯಂ ಮಾಡುತ್ತೇವೆಂದು ನೀವು ಹೊರನೋಟಕ್ಕೆ ವೈಟ್‌ವಾಷ್ ಮಾಡುತ್ತಿದ್ದೀರಿ. It is a statement which can only white-wash the things. ಈ ರೀತಿ ಮಾಡುವುದನ್ನು ಬಿಟ್ಟು ಇದರಲ್ಲಿರುವಂತಹ ಲೂಪ್-ಹೋಲ್ಸ್‌ನ್ನು ತೆಗೆದುಹಾಕುವುದರ ಮೂಲಕ ಇವರ ಕೆಲಸವನ್ನು ಖಾಯಂಗೊಳಿಸುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪಮೊಯ್ಲಿ ಅವರು ಮಾತನಾಡುವಾಗ ಸ್ಟೈಫಂಡರೀ ಪದವೀಧರರಿಗೆ ಸ್ಟೈಫಂಡ್ ಜಾಸ್ತಿ ಮಾಡಿದ್ದಾರೆಯೇ ಹೊರತು ಅವರ ಕೆಲಸವನ್ನು ಖಾಯಂ ಮಾಡಲಿಲ್ಲವೆಂದು ಹೇಳಿದರು. ಆದರೆ ಯಾವುದೇ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧದಲ್ಲಿ ಜಾಹೀರಾತು ಕೊಡುವಾಗ ಶೇಕಡಾ ೫೦ರಷ್ಟು ಹುದ್ದೆಗಳನ್ನು ಸ್ಟೈಫಂಡರೀ ಪದವೀಧರರಿಗೆ ಮೀಸಲಿಡಲಾಗಿದೆ ಎಂದು ತಿಳಿಸಲಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಆಜ್ಞೆಯನ್ನು ೧೯೮೨ರಲ್ಲಿ ನಾವೇ ಮಾಡಿದ್ದು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಈ ಆಜ್ಞೆಯನ್ನು ೧೯೮೨ರಲ್ಲಿ ಮಾಡಿದ್ದು ಅಲ್ಲ, ಅನಂತರ ಮಾಡಿದ್ದು. ಇದರಲ್ಲಿ ರಾಜಕೀಯ ಮಾಡಬಾರದು ಎಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ಆದರೆ ನಮ್ಮ ಸರ್ಕಾರದವರು ಈಗ ೪ ಸಾವಿರ ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಖಾಯಂಗೊಳಿಸುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ನಾನು ಆರೋಗ್ಯ ಇಲಾಖೆಯ ಮಂತ್ರಿಯಾಗಿದ್ದಾಗ, ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ೪೦೦ ಜನರ ಸೇವೆಯನ್ನು ಖಾಯಂಗೊಳಿಸಬೇಕೆಂದು ಮಾನ್ಯ ಬಸವಲಿಂಗಪ್ಪನವರು ಕೇಳಿಕೊಂಡರು. ಅದರ ಪ್ರಕಾರ ನಾನು ಕ್ರಮ ತೆಗೆದುಕೊಂಡ ನಂತರ ಆಗ ಅವರು ಆ ರೀತಿ ಮಾಡಿದ್ದು ತಪ್ಪು, ಅದನ್ನು ವಿರೋಧಿಸುತ್ತೇನೆ

ಎಂದು ಹೇಳಿಕೆ ಕೊಟ್ಟರು. ಹೀಗೆ ಇವರು ಇಲ್ಲಿ ಒಂದು ರೀತಿ ಮಾತನಾಡಿ ಹೊರಗಡೆ ಮತ್ತೊಂದು ರೀತಿಯಲ್ಲಿ ಮಾತನಾಡಿದರೆ, ಇವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ನಾವು ಯಾವ ರೀತಿ ಅರ್ಥ ಮಾಡಿಕೊಳ್ಳುವುದು ? ಈ ಸ್ಟೈಫಂಡರಿ ಪದವೀಧರರ ಬಗ್ಗೆ ಇವರು ಇಲ್ಲಿ ಏನು ಹೇಳುತ್ತಾರೆ ಮತ್ತು ಹೊರಗಡೆ ಏನು ಹೇಳುತ್ತಾರೆಂಬುದನ್ನು ನಾವು ಕಾದು ನೋಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಆ ರೀತಿ ಹೇಳಿದ್ದೇ ಹೊರತು, ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಅಲ್ಲ. Do not twist it. Systematically you want to suppress the weaker sections of the people. I can charge and I will prove it.

(ಗೊಂದಲ)

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಖರ್ಗೆಯವರು ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಂಥ ಅವರ ಹೇಳಿಕೆಯನ್ನು ಓದಲಿಲ್ಲ ಎಂದು ಕಾಣುತ್ತದೆ ರಾಜ್ಯ ಸರ್ಕಾರದ ನಾನಾ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೪ ಸಾವಿರ ಹಂಗಾಮಿ ನೌಕರರನ್ನು ಖಾಯಂಗೊಳಿಸಿದ ನಂತರ ಮಾನ್ಯ ಬಸವಲಿಂಗಪ್ಪನವರು ಅದನ್ನು ಬಹಿರಂಗವಾಗಿ ವಿರೋಧ ಮಾಡಿದ್ದಾರೆ. ಆದ್ದರಿಂದ ಇಲ್ಲಿ ನಮಗೆ ಏನು ಅನುಮಾನ ಬರುತ್ತಿದೆ ಎಂದರೆ, ಸ್ಟೈಫಂಡರೀ ಪದವೀಧರರ ಬೇಡಿಕೆಗಳನ್ನು ಇಲ್ಲಿ ಇವರು ಸಮರ್ಥಿಸಿ ಮತ್ತೆ ಹೊರಗಡೆ ಅದನ್ನು ವಿರೋಧ ಮಾಡುತ್ತಾರೋ ಏನೋ ಎಂಬ ಅನುಮಾನ ಬರುತ್ತಿದೆ. ಮಾನ್ಯ ಬಸವಲಿಂಗಪ್ಪನವರು ಈ ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಮತ್ತು ಬಹಳ ವರ್ಷಗಳ ಕಾಲ ಈ ಮನೆಯ ಸದಸ್ಯರಾಗಿ ಕೆಲಸ ಮಾಡಿ ಹೆಚ್ಚಿನ ಅನುಭವ ಹೊಂದಿದ್ದಾರೆ. ಆದ್ದರಿಂದ ಇಂತಹವರು ಇಲ್ಲಿ ಒಂದು ರೀತಿ ಮತ್ತು ಹೊರಗಡೆ ಒಂದು ರೀತಿ ಹೇಳಿಕೆ ಕೊಡುವುದು ಸರಿಯೇ ? ನಾವು ಯಾರೂ ಇವರನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿಲ್ಲ.

(ಗೊಂದಲ)

ನಾನು ಹೇಳುವುದಿಷ್ಟೆ. ಇವರ ಉದ್ಧಾರ ಕೇವಲ ವಿರೋಧ ಪಕ್ಷದವರಿಂದ ಆಗುತ್ತದೆ ಇಲ್ಲವೇ ಆಡಳಿತ ಪಕ್ಷದವರಿಂದ ಆಗುತ್ತದೆ ಎಂದು ನಾವುಗಳು ಯಾರೂ ಭಾವಿಸಿಕೊಳ್ಳದೆ, ನಾವುಗಳೆಲ್ಲರೂ ಸರ್ವಾನುಮತದಿಂದ ಇವರಿಗೆ ಸಹಾಯಕವಾಗುವಂತಹ ರೀತಿಯಲ್ಲಿ ಒಂದು ತೀರ್ಮಾನ ಕೈಕೊಳ್ಳೋಣ. ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡಿದಂತೆ ಇವರನ್ನು ಖಾಯಂಗೊಳಿಸುವ ಬಗ್ಗೆ ಒಂದು ತೀರ್ಮಾನ ಕೈಕೊಳ್ಳಬೇಕೆಂದು ನಾವೆಲ್ಲರೂ ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳೋಣ. ಈಗ ಇವರಿಗೆ ೩೦೦ ರೂ.ಗಳಿಂದ ೪೫೦ಕ್ಕೆ ಸ್ಟೈಫಂಡನ್ನು ಹೆಚ್ಚಿಸಲಾಗಿದೆ. ಅದೇ ರೀತಿ ಇವರ ಸೇವೆಯನ್ನು ಖಾಯಂ ಮಾಡಬೇಕೆಂದು ಆಡಳಿದ ಪಕ್ಷದ ಕಡೆಯಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಬೊಮ್ಮಾಯಿ ಅವರು ಕಾನೂನು ಇಲಾಖೆಯವರ ಜೊತೆಯಲ್ಲಿ ಸಮಾಲೋಚನೆ ಮಾಡುವುದರ ಮೂಲಕ, ಯಾವ ರೀತಿ ಇವರನ್ನು ಖಾಯಂಗೊಳಿಸಬಹುದೆಂಬುದನ್ನು ವಿಚಾರ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಂಗಂಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದ್ದೇನೆ. ಮಾನ್ಯ ಸದಸ್ಯರು ಕೆಲವರು ಕೊಟ್ಟ ಅಭಿಪ್ರಾಯಗಳನ್ನು ಸಹ ಕೇಳಿದ್ದೇನೆ. ಆದರೆ ಈ ಸದನದಲ್ಲಿ ಕುತುಕೊಂಡು ಮಾತನಾಡುವಾಗ ಸಮಗ್ರ ಕರ್ನಾಟಕ ರಾಜ್ಯದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು ಕೆಲವೇ ಕೆಲವು ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸುವುದು ಸರಿಯಲ್ಲ. ಒಂದು ವೇಳೆ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸುವಾಗ ಕಾನೂನಿಗೆ, ರಾಜ್ಯಾಂಗಕ್ಕೆ ವಿರೋಧವಾಗಿ ನಾವು ನಡೆದುಕೊಳ್ಳಬಾರದು. ನಮ್ಮ ರಾಜ್ಯಾಂಗದ ವಿಧಿ ೧೬ (೪) ಮತ್ತು ೩೩೫ ಮತ್ತು ೧೫(೪) ಶಾಶ್ವತವಾಗಿದ್ದಾವೆ. ಅದೇ ರೀತಿ ಸುಪ್ರಿಂ ಕೋರ್ಟ್‌ಗಳು, ಹೈಕೋರ್ಟ್‌ಗಳು ಇದರ ಬಗ್ಗೆ ಅರ್ಥಗರ್ಭಿತವಾಗಿ ವ್ಯಾಖ್ಯಾನ ಮಾಡಿದ್ದಾವೆ. ಮತ್ತು ಇವರನ್ನು ಖಾಯಂ ಮಾಡಬೇಕೆಂದು ತೀರ್ಪುಗಳು ಸಹ ಕೊಟ್ಟಿದ್ದಾರೆ. ಆ ತೀರ್ಪಿಗೆ ವಿರುದ್ಧವಾಗಿ ನಿಯಮಗಳಿಗೆ ವಿರುದ್ಧವಾಗಿ ರೂಲ್ಸ್‌ಗಳಿಗೆ ವಿರುದ್ಧವಾಗಿ ನಾವು ನಡೆದುಕೊಳ್ಳುವುದು

ಸರಿಯಲ್ಲ. ೫೧೯ರ ರಾಜ್ಯಾಂಗದ ವಿಧಿಯಲ್ಲಿ ಏನೇನು ಹೇಳಿದ್ದಾರೋ ಆ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಏನಾದರೂ ವಿರುದ್ಧವಾಗಿ ಹೋದರೆ ಕೆಲವರಿಗೆ ಅನುಕೂಲವಾಗುತ್ತದೆ. ಕೆಲವರಿಗೆ ಅನಾನುಕೂಲವಾಗುತ್ತದೆ. ಇದನ್ನು ಸಹ ನಾವು ಯೋಚನೆ ಮಾಡಬೇಕಾಗುತ್ತದೆ. ಈ ದಿವಸ ಕೆಲವು ಜನರಿಗೆ ಸರ್ಕಾರದಲ್ಲಿ ನ್ಯಾಯ ಸಿಗಬೇಕೆನ್ನುವುದಕ್ಕೋಸ್ಕರ ಕಾನೂನಿನಲ್ಲಿ ಏನಿದೆಯೋ ಅದೇ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕಾಗುತ್ತದೆ. ರಾಜ್ಯಾಂಗದ ಪ್ರಕಾರ ಈ ದೇಶದಲ್ಲಿ ಹಿಂದುಳಿದ ವರ್ಗದವರು ಇದ್ದಾರೆ. ಅಲ್ಪಸಂಖ್ಯಾತರು ಇದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರು ಇದ್ದಾರೆ ಅವರೆಲ್ಲರಿಗೂ ಸರಿಯಾದ ಪ್ರಾತಿನಿಧ್ಯ ಕೊಡಬೇಕೆಂದು ಪದೇಪದೇ ಸುಪ್ರಿಂ ಕೋರ್ಟ್‌ಗಳು, ಹೈಕೋರ್ಟ್‌ಗಳು ನಿರ್ಣಯಗಳನ್ನು ಕೊಟ್ಟಿರುವಾಗ ಅದಕ್ಕೆ ತದ್ವಿರುದ್ಧವಾಗಿ ನಾವು ಇವತ್ತು ಮಾಡುತ್ತಿದ್ದೇವೆ. ಯಾವುದೇ ಒಂದು ಸಮಸ್ಯೆಯನ್ನು ಬಗೆಹರಿಸುವಾಗ ಇದರ ಬಗ್ಗೆ ಕೂಡ ಯೋಚನೆ ಮಾಡಿದ್ದಾರೆಯೋ ಎಂದು ನಾವು ಪ್ರಶ್ನೆ ಮಾಡುವುದಾದರೆ ಅದಕ್ಕೆ ಉತ್ತರ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗ ಈ ಪದವೀಧರರ ವಿಚಾರವಾಗಿ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ತಿಳಿದೋ ತಿಳಿಯದೆಯೋ ತಪ್ಪು ಮಾಡಿದ್ದಾರೆ. ಆಗ ಮಂತ್ರಿಗಳಾಗಿ ಶ್ರೀಮಾನ್ ದೇವರಾಜ ಅರಸುರವರು ಮಾಡಿದಂಥ ಸ್ಕೀಮ್ ಇದು. ಆಗ ನಾನು ಸಹ ಈ ಸ್ಕೀಮ್ ತರುವುದಕ್ಕೆ ಸಹಾನುಭೂತಿ ವ್ಯಕ್ತಪಡಿಸಿದ್ದೆ. ಆಗ ನಾವು ಈ ಸ್ಕೀಮ್‌ನ್ನು ಮಾಡಿದ ಉದ್ದೇಶವೇನೆಂದರೆ ಒಂದು ೧೦೦ ಅಥವಾ ೧೫೦ ಜನರಿಗೆ ಹಂಗಾಮಿಯಾಗಿ ಉದ್ಯೋಗಾವಕಾಶವನ್ನು ಒದಗಿಸಿಕೊಡುವುದಕ್ಕೋಸ್ಕರ ಮಾಡಿದ್ದೆವು. ಆದರೆ ಇದು ಬರುಬರುತ್ತಾ ಏನಾಯಿತು ಎಂದರೆ ಒಂದು ದೊಡ್ಡ ಭೂತವಾಗಿ ಬೆಳೆದುಕೊಂಡು ಬಂತು. ಸ್ಟೈಪೆಂಡರಿಯಾಗಿ ನೇಮಕ ಮಾಡಿಕೊಳ್ಳುವುದು, ಹಂಗಾಮಿಯಾಗಿ ನೇಮಕ ಮಾಡಿಕೊಳ್ಳುವುದು, ನಡೆಯಿತು. ಆಗ ಕೆಲವು ಜನ ಅಧಿಕಾರಿಗಳು ಏನು ಮಾಡಿದರು ಎಂದರೆ ತಮ್ಮ ಜಾತಿಯವರನ್ನೆಲ್ಲಾ ತುಂಬಿಕೊಂಡರು. ಹಿಂದುಳಿದ ವರ್ಗದವರು ಯಾರೂ ಇಲ್ಲ, ಈ ಸ್ಟೈಪೆಂಡರಿಯಲ್ಲಿ ಬೆಸ್ತರು ಇಲ್ಲ, ಕುರುಬರು ಇಲ್ಲ, ಬೇಡರು ಇಲ್ಲ, ನಮ್ಮ ದೇಶದಲ್ಲಿ ಸುಮಾರು ೪-೫ ಸಾವಿರ ಜಾತಿಗಳು ಇವೆ. ಆ ಜಾತಿಗಳವರೆಲ್ಲರೂ ಇಲ್ಲ. ಪರಿಶಿಷ್ಟ ಜಾತಿಯವರು ಎಷ್ಟು ಜನರಿದ್ದಾರೆ. ೧೯೬೨ನೇ ಇಸವಿಯಲ್ಲಿ ಹಂಗಾಮಿಯಾಗಿ ಸೇರಿಕೊಂಡವರೆಲ್ಲರೂ ಖಾಯಂ ಆಗಬೇಕೆಂದು ಸುಪ್ರಿಂ ಕೋರ್ಟ್ ತೀರ್ಪು ಕೊಟ್ಟಿತ್ತು. ಅದೇ ರೀತಿಯಲ್ಲಿ ಇತ್ತೀಚಿಗೆ ತಾವೆಲ್ಲ ನೋಡಿರುವ ಹಾಗೆ ಕೂಲಿ ಮಾಡುವಂತಹ ನೌಕರರನ್ನು ಕೂಡ ಖಾಯಂ ಮಾಡಿಕೊಳ್ಳಬೇಕೆಂದು ಸುಪ್ರಿಂ ಕೋರ್ಟ್ ತೀರ್ಪು ಕೊಡುತ್ತಿದೆ. ಈ ರೀತಿ ಇರುವಾಗ ನಾವು ಸಹ ಯೋಚನೆಮಾಡಬೇಕಾಗುತ್ತದೆ. ಈಗ ಹೈದ್ರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಇದ್ದಾರೆ ? ಎಷ್ಟು ಜನ ಹಿಂದುಳಿದ ವರ್ಗದ ಜನರು ಇದ್ದಾರೆ? ಎಷ್ಟು ಜನ ಮುಸ್ಲಿಮರು ಇದ್ದಾರೆ ? ಎಷ್ಟು ಜನ ಕ್ರಿಶ್ಚಿಯನ್ನರು ಇದ್ದಾರೆ ? ದಯಮಾಡಿ ತಾವು ಇದನ್ನೆಲ್ಲಾ ಯೋಚನೆ ಮಾಡಿ. ಇವತ್ತು ಈ ಸ್ಟೈಪೆಂಡರಿಗಳು ೯ ವರ್ಷಗಳಿಂದ ಇದ್ದರೂ ಸಹ ಇವರಂತೆ ಲಕ್ಷಾಂತರ ಜನ ಪದವಿಯನ್ನು ಪಡೆದುಕೊಂಡು ಬೀದಿಯಲ್ಲಿ ಬಿದ್ದಿದ್ದಾರೆ. ಪ್ರತಿ ವರ್ಷ ವಿಶ್ವವಿದ್ಯಾನಿಲಯಗಳಿಂದ ಲಕ್ಷಾಂತರ ಜನ ಪದವಿಯನ್ನು ಪಡೆದುಕೊಂಡು ಹೊರಗಡೆ ಬರುತ್ತಿದ್ದಾರೆ. ಅವರಲ್ಲಿ ಎಂ.ಎ. ಪಾಸ್ ಮಾಡಿರುವವರೂ ಇದ್ದಾರೆ. ಬಿ.ಎ. ಪಾಸ್ ಮಾಡಿರುವವರು ಇದ್ದಾರೆ. ಬಿ.ಎಡ್. ಪಾಸ್ ಮಾಡಿರುವವರು ಇದ್ದಾರೆ...............

ಶ್ರೀ ಎಂ. ಎಸ್. ಕೃಷ್ಣನ್ —ಸಭಾಧ್ಯಕ್ಷರೇ ಈ ಸದನದಲ್ಲಿ ಸ್ವೀಟ್ ಹಂಚುತಿದ್ದಾರೆ. ಅದು ಸರಿಯೇ ?

ಅಧ್ಯಕ್ಷರು.—ಅದು ಸರಿಯಿಲ್ಲ. ನಾನು ಕರೆಸಿ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಹಿಂದೆ ನಾವು ಈ ಸ್ಕೀಮ್ ಮಾಡಿದಾಗ ೨೦ ಜನರನ್ನು ತೆಗೆದುಕೊಳ್ಳಬೇಕೆಂದು ಮಾಡಿದೆವು. ಆಗ ಸುಮಾರು ೫೦೦ ಅರ್ಜಿಗಳು ಬಂದವು. ಅದರಲ್ಲಿ ಎಂ.ಎ., ಬಿ.ಎ., ಬಿ.ಎಡ್. ಪಾಸ್ ಮಾಡಿದವರು ಸಹ ಅರ್ಜಿ ಸಲ್ಲಿಸಿದ್ದರು. ಆಗ ನಾವು ಬರೀ ೨೦ ಜನರನ್ನು ಮಾತ್ರ ತೆಗೆದುಕೊಂಡಿದ್ದು. ಈಗ ಸುಮಾರು ೯ ಸಾವಿರಕ್ಕೆ ಹೋಗಿದ್ದಾರೆ. ಅದೇ ರೀತಿ ನಿರುದ್ಯೋಗ ಪದವೀಧರರು ಸುಮಾರು ಎರಡೂವರೆ ಲಕ್ಷ ಜನರಿದ್ದಾರೆ. ಅವರೆಲ್ಲ ಬೀದಿ ಬೀದಿ ಸುತ್ತುತ್ತಿದ್ದಾರೆ. ಅವರ ಬಗ್ಗೆ ಕೂಡ ನಾವು ಯೋಚನೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾವು

ಯಾವುದೇ ಹುದ್ದೆಗಳಿಗೆ ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವಾಗ ಈ ಬೀದಿಯಲ್ಲಿರುವ ನಿರುದ್ಯೋಗ ಪದವೀಧರರನ್ನು ಸಹ ಚಿಂತನೆಯಲ್ಲಿಟ್ಟುಕೊಳ್ಳಬೇಕು. ನಾವು ಯಾವುದೇ ಒಂದು ಕೆಲಸವನ್ನು ಮಾಡುವಾಗ ರಾಜ್ಯಾಂಗದ ಪ್ರಕಾರ, ಕಾನೂನು ಪ್ರಕಾರ ನಿರ್ಣಯಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪು ಮಾಡಿದಂತೆ ಆಗುತ್ತದೆ. ನಾವು ಯಾವುದೇ ಒಂದು ನಿರ್ಣಯವನ್ನು ಈ ಬಗ್ಗೆ ತೆಗೆದುಕೊಳ್ಳುವಾಗ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಕೊಟ್ಟಿರತಕ್ಕಂಥ ತೀರ್ಪುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಎರಡೂವರೆ ಲಕ್ಷ ಜನ ನಿರುದ್ಯೋಗಿಗಳು ಇವತ್ತು ಬೀದಿಯಲ್ಲಿ ಸುತ್ತುತ್ತಿದ್ದಾರೆ. ಅವರ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕೆನ್ನುವುದರ ಕಡೆಗೂ ಸಹ ಯೋಚನೆ ಮಾಡಬೇಕು. ನಮ್ಮ ಮನಸ್ಸಿನ ಅನುಕಂಪಕ್ಕೆ ಅನುಗುಣವಾಗಿ ನಾವು ನಡೆದುಕೊಳ್ಳಬಾರದು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಎಲ್ಲರ ಹಿತಾಸಕ್ತಿಯನ್ನು ನಾವು ಕಾಪಾಡಬೇಕಾಗುತ್ತದೆ. ಆದ್ದರಿಂದಲೇ ಈ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈಗ ಈ ಸ್ಟೈಪೆಂಡರಿ ಪದವೀಧರರಿಗೆ ೪೯೦ ರೂಪಾಯಿಗಳ ಸಂಬಳವಾದರೂ ಸಿಗುತ್ತಿದೆ. ಆದೇ ನಿರುದ್ಯೋಗಿ ಪದವೀಧರರಿಗೆ ಅದೂ ಇಲ್ಲ. ಒಂದು ವೇಳೆ ಮಾನ್ಯ ಬೊಮ್ಮಾಯಿಯವರು ಅನುಕಂಪಕ್ಕೆ ಸೋತುಹೋಗುವುದಾದರೆ ಈ ನಿರುದ್ಯೋಗ ಪದವೀಧರರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ರಾಜ್ಯಾಂಗದ ನಿಯಮಗಳ ಪ್ರಕಾರ ನಿಯಮ ೩೦೯ರ ಕೆಳಗೆ ಏನಿದೆಯೋ ಅದೇ ಪ್ರಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಲ್ಲಿ ಆ ಪಕ್ಷ ಈ ಪಕ್ಷ ಎಂದೇನು ಇಲ್ಲ ಸರ್ಕಾರದವರು ಯಾವುದಾದರೊಂದು ಕಾನೂನು ಮಾಡುವಾಗ ಆಲೋಚನೆ ಮಾಡಿ ಮಾಡಬೇಕಾಗುತ್ತದೆ. ನಿಯಮಗಳಿಗೆ ಅನುಸಾರವಾಗಿ ಮಾಡಬೇಕಾಗುತ್ತದೆ. ನಾನು ಈ ರೀತಿ ಹೇಳುತ್ತಿದ್ದೇನೆಂದು ನನ್ನ ಸ್ನೇಹಿತರು ವಿರೋಧ ಮಾಡಿದರೂ ಪರವಾಗಿಲ್ಲ. ನಿಷ್ಠುರಕ್ಕೂ ಮತ್ತು ಸತ್ಯಸಂಗತಿಗೂ ಇರತಕ್ಕಂಥಾದ್ದು ಒಂದೇ ಅರ್ಥ. ನಿಷ್ಠುರಕ್ಕೆ ತಲೆಬಾಗಿ ಏನಾದರೂ ಮಾಡುವುದಕ್ಕೆ ನೀವು ಹೊರಟರೆ ಅದು ಕಾನೂನು ಬಾಹಿರವಾಗುತ್ತದೆಂದು ಹೇಳಿ ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ೯ ಸಾವಿರ ಜನ ಪದವೀಧರರು ಸ್ಟೈಪೆಂಡರಿಗಳ ಶೋಷಣೆ ಕಳೆದ ೯ ವರ್ಷಗಳಿಂದ ನಡೆಯುತ್ತಿದೆ. ಇದು ನಾವೆಲ್ಲ ತಲೆತಗ್ಗಿಸುವಂತಹ ವಿಚಾರ ಈ ೯ ಸಾವಿರ ಜನ ಸ್ಟೈಪೆಂಡರಿ ಪದವೀಧರರಲ್ಲಿ ಎಂ.ಎ. ಪಾಸ್ ಮಾಡಿರುವವರು ಇದ್ದಾರೆ. ಬಿ.ಎ, ಬಿಎಡ್. ಪಾಸ್ ಮಾಡಿರುವವರು ಇದ್ದಾರೆ. ಡಿಪ್ಲೊಮ ಇಂಜನಿಯರಿಂಗ್, ಮೆಕಾನಿಕಲ್, ಸಿವಿಲ್ ಇಂಜಿನಿಯರಿಂಗ್ ಪಾಸ್ ಮಾಡಿರುವವರು ಸಹ ಇದ್ದಾರೆ. ಇವರಿಗೆ ಸರ್ಕಾರದವರು ಕೊಡತಕ್ಕಂಥ ಸ್ಟೈಪೆಂಡ್ ತಿಂಗಳಿಗೆ ೪೯೦ ರೂಪಾಯಿಗಳು ಮಾತ್ರ. ಅದರಲ್ಲಿ ಅವರು ಮನೆ ಬಾಡಿಗೆ ಕೊಡಬೇಕು. ತಮ್ಮ ಮಕ್ಕಳ ಫೀಜು ಕೊಡಬೇಕು. ಜೀವನ ಮಾಡಬೇಕು. ಇದು ಯಾವ ರೀತಿ ಸಾಧ್ಯವಾಗುತ್ತದೆ? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪಮೊಯ್ಲಿಯವರು ಹೇಳಿದ ಹಾಗೆ ಮಾನವೀಯಂತೆ ದೃಷ್ಟಿ ಬಂದಾಗ ಕಾನೂನು ಅಡ್ಡಿ ಬರಲಾರದು, ಆ ರೀತಿ ಅಡ್ಡಿ ಬರುವುದಾದರೆ ತಾವು ಕಾನೂನು ಪಂಡಿತರನ್ನು ವಿಚಾರ ಮಾಡಿ ಎಂದು ಹೇಳಿದ್ದಾರೆ. ಅದು ಸರಿಯಾಗಿದೆ. ಒಂದು ವೇಳೆ ಈ ಸ್ಟೈಪೆಂಡರಿ ಪದವೀಧರರು ಈಗ ಖಾಯಂ ಆದರೂ ಸಹ ಅವರಿಗೆ ಯಾವುದೇ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ಅವರಲ್ಲಿ ಕೆಲವರಿಗೆ ೪೦-೪೫ ವರ್ಷ ವಯಸ್ಸಾಗಿದೆ. ಈಗ ಖಾಯಂ ಆದರೂ ಸಹ ಅವರು ೧೫ ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ಅವರಿಗೆ ಯಾವುದೇ ರೀತಿಯ ಬಡ್ತಿ ಸಿಗುವುದಿಲ್ಲ. ಆದ್ದರಿಂದ ಅವರನ್ನು ಸರ್ಕಾರದವರು ಖಾಯಂ ಮಾಡಿ ಅವರು ಸಹ ಸಮಾಜದಲ್ಲಿ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಸ್ಟೈಪೆಂಡರಿ ಪದವೀಧರರನ್ನು ಖಾಯಂ ಮಾಡಿದರೆ ಜನತಾ ಸರ್ಕಾರಕ್ಕೂ, ಜನತಾ ಪಕ್ಷಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ ದಯಮಾಡಿ ಅವರೆಲ್ಲರನ್ನು ಖಾಯಂ ಮಾಡಿಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಈಗಾಗಲೇ ಈ ಸ್ಟೈಫಂಡರಿ ಪದವೀಧರರ ಬಗ್ಗೆ ಮಾತನಾಡುತ್ತಾ ಯಾವ ಆಧಾರದ ಮೇಲೆ ನ್ಯಾಯಂ ಮಾಡಬೇಕೆಂಬುದನ್ನು ವಿವರವಾಗಿ ಯೋಚನೆ ಮಾಡಬೇಕೆಂದು ಹೇಳಿದ್ದಾರೆ. ನಾನು ವಿವರಗಳಿಗೆ ಹೋಗುವುದಿಲ್ಲ, ಏಕೆಂದರೆ ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ. ಇವರ ಸಮಸ್ಯೆ ೯ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ ಎಂದು ಹೇಳಿದ್ದಾರೆ. ೯ ವರ್ಷಗಳಿಂದ ಎಲ್ಲರೂ ಚರ್ಚೆ ಮಾಡುತ್ತಾಲೇ ಬಂದಿದ್ದಾರೆ. ಮಾನ್ಯ ದೇವರಾಜ ಅರಸು ಅವರ ಕಾಲದಲ್ಲೂ ಇವರ ಬಗ್ಗೆ ಭರವಸೆ ಕೊಟ್ಟರು. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇವರನ್ನು ಪರ್ಮನೆಂಟ್ ಮಾಡುತ್ತೇವೆಂದು ಭರವಸೆ ಕೊಟ್ಟರು. ನೀವು ಕೂಡ ಭರವಸೆ ಕೊಟ್ಟಿರುತ್ತೀರಿ. ಆದರೆ ಇವತ್ತು ಯಾವ ರೀತಿಯಿಂದ ಇವರ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕೆಂಬುದು ಬಹಳ ಮುಖ್ಯವಾದ ವಿಚಾರವಾಗಿದೆ. ಒಂದು ಸಮಸ್ಯೆಯನ್ನು ಮಾನ್ಯ ಬಸವಲಿಂಗಪ್ಪನವರು ಅರಿತಿದ್ದಾರೆ. ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ ತಪ್ಪಾಗುತ್ತದೆ. ಸ್ಟೈಫಂಡರಿ ಪದವೀಧರರಿಗೆ ಖಾಯಂ ಮಾಡುವ ವಿಷಯದಲ್ಲಿ ಯಾರು ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಇದ್ದಾರೆ ಅವರ ಬಗ್ಗೆಯೂ ಗಮನಹರಿಸಬೇಕು, ಆದ್ಯತೆ ಕೊಡಬೇಕು. ಸಂವಿಧಾನದ ಪ್ರಕಾರ ಗಮನ ಕೊಡಬೇಕೆಂಬುದು ಅತಿ ಮುಖ್ಯವಾದ ಅಂಶ. ಇದನ್ನು ಮಾಡದೇಹೋದರೆ ಸಂವಿಧಾನಕ್ಕೆ ವಿರೋಧವಾಗುತ್ತದೆ. ನನಗನಿಸುತ್ತದೆ, ಸಂವಿಧಾನದ ಪ್ರಕಾರ ನಡೆಯುವುದು ಸರಿಯಾದ ಮಾತು. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರಲ್ಲಿ ಕೆಲವೇ ಜಾತಿಯವರು ಸೇರಿಕೊಂಡಿದ್ದಾರೆ. ಹಿಂದುಳಿದ ವರ್ಗದವರಿಗೆ, ಎಸ್.ಸಿ. ಎಸ್.ಟಿ ಯವರಿಗೆ ಅನ್ಯಾಯವಾಗುತ್ತದೆ. ಇದನ್ನು ಸರ್ಕಾರದವರು ಮನಸ್ಸಿಗೆ ತೆಗೆದುಕೊಳ್ಳಬೇಕು ಖಾಯಂ ಯಾವರೀತಿ ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರದವರು ತಲೆ ಹಾಕಬೇಕು ಹಿಂದೆ ಲೋಕಲ್ ಕ್ಯಾಂಡಿಡೇಟ್ಸ್ ಪ್ರಶ್ನೆಯೂ ಬಂತು. ಆಗ ೭,೦೦೦ ಜನರನ್ನು ಖಾಯಂ ಮಾಡಬೇಕೆಂಬ ಪ್ರಶ್ನೆ ಇಲ್ಲಿಯೂ ಬಾತು. ಮಾನ್ಯ ರಾಚಯ್ಯನವರು ಇದ್ದಾಗ ಚರ್ಚೆ ಮಾಡಿದ್ದೇವೆ. ಸರ್ಕಾರದಲ್ಲಿ ಚರ್ಚೆ ಮಾಡಿದ್ದೇವೆ. ರೋಸ್ಟರ್ ಸಿಸ್ಟಂ ಪ್ರಕಾರ ಅವರಿಗೆ ಆದ್ಯತೆ ಕೊಡಬೇಕು. ಎಸ್.ಸಿ , ಎಸ್.ಟಿ. ಅವರಿಗೆ ಏನು ಅವಕಾಶಗಳು ಇವೆಯೋ ಅದೇ ಪ್ರಕಾರವಾಗಿ ಕೊಡಬೇಕೆಂದು ತೀರ್ಮಾನವಾಗಿ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡಲಾಯಿತು. ಆದರೂ ಕೂಡ ಇನ್ನೂ ಕೆಲವರು ಅವರಲ್ಲಿ ಉಳಿದುಕೊಂಡಿದ್ದಾರೆ. ದಾಮಾಷ ಪ್ರಕಾರ ಕೊಡಬೇಕೆಂದರೆ ಅಷ್ಟು ಜನರು ಎಸ್.ಸಿ ಎಸ್ ಟಿ ಯವರು ಇರಲಿಲ್ಲ. ಈ ರೀತಿ ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ಖಾಯಂ ಮಾಡಿರಬೇಕಾದರೆ, ಅದೇ ರೀತಿಯಾಗಿ ಸ್ಟೈಫಂಡರಿ ಪದವೀಧರರನ್ನೂ ಏಕೆ ಖಾಯಂ ಮಾಡಬಾರದು ? ಮಾಡಬಹುದೆಂದು ನನಗನಿಸುತ್ತದೆ ಸ್ಟೈಫಂಡರಿ ಪದವೀಧರರಿಗೆ ಹೈಕೋರ್ಟ್ ತೀರ್ಮಾನ ಪ್ರಕಾರ ೫೦ ಪರ್ಸೆಂಟ್, ಲೋಕಲ್ ಕ್ಯಾಂಡಿಡೇಟ್ಸ್‌ಗೆ ೫೦ ಪರ್ಸೆಂಟ್ ಎಂದು ಮಾಡಿದ್ದಾರೆ. ಈ ಪ್ರಕಾರ ಇವರು ಇನ್ನು ೧೦ ವರ್ಷಗಳಾದರೂ ಹೀಗೆಯೇ ಕೊಳೆಯಬೇಕಾಗುತ್ತದೆ. ಖಂಡಿತವಾಗಿ ಖಾಯಂ ಆಗುವುದಿಲ್ಲ. ಇದು ಅಷ್ಟು ಸಮಂಜಸವೂ ಅಲ್ಲ. ನ್ಯಾಯ ಅವರಿಗೆ ಸಿಕ್ಕುವುದಿಲ್ಲ. ಇದನ್ನು ಬದಲಾವಣೆ ಮಾಡಬೇಕು ಸ್ಟೈಫಂಡರಿಯವರನ್ನು ಲೋಕಲ್ ಕ್ಯಾಂಡಿಡೇಟ್ ಆಗಿ ಪರಿವರ್ತನೆ ಮಾಡುವುದಕ್ಕೆ ಅವಕಾಶ ಇದೆ ಎಂದು ತಿಳಿದು ಬಂದಿದೆ. ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ಅವಕಾಶ ಇದೆಯೆಂದು ತಿಳಿದು ಬಂದಿದೆ. ಆಂಧ್ರದಲ್ಲಿ ಈಗಾಗಲೇ ಈ ಬಗ್ಗೆ ಸರ್ಕ್ಯುಲರ್ ಹೊರಡಿಸಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ದಯಮಾಡಿ ಅದನ್ನು ನೋಡಿ. ಈ ಪ್ರಶ್ನೆ ಎಲ್ಲಾ ರಾಜ್ಯಗಳಲ್ಲೂ ಇರಬಹುದು. ಆದರೆ ಕೆಲವು ಕಡೆ ಇತ್ಯರ್ಥ ಆಗಿರಬೇಕಾದರೆ, ಅಲ್ಲಿಂದ ವರದಿಯನ್ನು ತರಿಸಿ, ಅದರ ಆಧಾರದಮೇಲೆ ಲೋಕಲ್ ಕ್ಯಾಂಡಿಡೇಟ್ ಎಂದು ಪರಿಗಣಿಸಿ, ಹಾಗೂ ರೋಸ್ಟರ್ ಸಿಸ್ಟಂನ್ನು ಗಮನಕ್ಕೆ ತೆಗೆದುಕೊಂಡರೆ ಎಲ್ಲರಿಗೂ ಖಾಯಂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಖಾಲಿ ಇರುವ ಹುದ್ದೆಗಳು ಸಾವಿರಾರು ಇವೆ. ಇದರಿಂದ ಖಜಾನೆ ಏನೂ ಬರಿದಾಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದ ವಿಚಾರಗಳ ಬಗ್ಗೆಯೂ ಗಮನಹರಿಸಬೇಕು. ಹಾಗೂ ಮಾನವೀಯತೆ ದೃಷ್ಟಿಯಿಂದಲೂ ಇದನ್ನು ತೀರ್ಮಾನ ಮಾಡಬೇಕು. ನಿನ್ನೆಯ ದಿವಸ ನಾವು ಈ ವಿಚಾರವಾಗಿ ಚರ್ಚೆ ಮಾಡಿದ್ದೇವೆ. ನಾನು, ಮಾನ್ಯ ವೆಂಕಟರಾಮಯ್ಯನವರು, ಮಾನ್ಯ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡಿದ್ದೇವೆ. ಆ ಸಮಯದಲ್ಲಿ ಮಾನ್ಯ ಭೈರೇಗೌಡರು, ರಮೇಶ್ ಕುಮಾರ್ ಅವರೂ ಹಾಗೂ ಇನ್ನು ಯಾರ್ಯಾರೋ ಇದ್ದರು. ಕಮ್ಯುನಿಸ್ಟ್ ಪಾರ್ಟಿಯವರೂ ಇದ್ದರು; ಕಾಂಗ್ರೆಸ್‌ನವರೂ ಒಬ್ಬಿಬ್ಬರು ಇದ್ದರೆಂದು

ಕಾಣುತ್ತದೆ. ಅಲ್ಲಿ ಚರ್ಚೆ ನಡೆದು ಮುಖ್ಯಮಂತ್ರಿಗಳು ಏನು ಸೂಚನೆ ಮಾಡಿದರು ಎಂದರೆ, ೫—೬ ಜನ ಸೇರಿ, ಕುಳಿತು ಕೊಂಡು ಈ ಸಮಸ್ಯೆಯನ್ನು ಇತ್ಯರ್ಥ ಮಾಡಿದರೆ, ಏನೂ ತೊಂದರೆ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ೫—೬ ಜನ ಕುಳಿತುಕೊಂಡು ಚರ್ಚೆ ಮಾಡಿ ಒಂದು ತಿಂಗಳಲ್ಲಿ ಇತ್ಯರ್ಥ ಮಾಡೋಣ. ಇದರ ಬಗ್ಗೆ ಕಮಿಟಿ ಮಾಡಿದರೆ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಅರ್ಜೆಂಟ್ ಅಂದರೂ ೬ ತಿಂಗಳಿಗಿಂತ ಕಡಿಮೆಯಾಗುವುದಿಲ್ಲ. ಇಲ್ಲವೇಹೋದರೆ ಈಗಾಗಲೇ ಕೊಡುತ್ತಿರುವ ಮಾಸಿಕ ವೇತನ ೪೯೦ ರೂಪಾಯಿಗಳನ್ನು ೬೦೦ ರೂಪಾಯಿಗಳಿಗೆ ಜಾಸ್ತಿ ಮಾಡಿ. ದಯಮಾಡಿ ಇವರಿಗೆ ಅನುಕೂಲ ಆಗುವ ರೀತಿಯಲ್ಲಿ, ಇವರ ಸಮಸ್ಯೆಗಳನ್ನು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಈ ಸ್ಟೈಫೆಂಡರಿ ಪದವೀಧರರು ಕಳೆದ ೯ ವರ್ಷಗಳಿಂದ ಹೀಗೆಯೇ ಉಳಿದುಕೊಂಡು ಬಂದಿದ್ದಾರೆ. ನಾನು ಈ ಸದನದ ಸದಸ್ಯನಾಗಿ ಬಂದ ಮೇಲೆ ಮೊದಲನೇ ಭಾಷಣದಲ್ಲಿಯೇ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿಯೂ ಹಂತ ಹಂತವಾಗಿ ಖಾಯಂಗೊಳಿಸಲಾಗುವುದೆಂದು ಪ್ರಸ್ತಾಪಿಸಲಾಗಿದೆ. ಇದನ್ನು ಮರೆಯಬಾರದು. ಮುಖ್ಯವಾದ ವಿಚಾರವೆಂದರೆ, ಈ ಸ್ಟೈಫೆಂಡರಿ ಪದವೀಧರರನ್ನು ಖಾಯಂ ಮಾಡುವ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ಈ ವಿಷಯದಲ್ಲಿ ಹಿಂದೆ ಇವರಿಗೆ ಮಾಸಿಕ ವೇತನ ೨೫೦ ರೂಪಾಯಿಗಳು ಇದ್ದುದನ್ನು ನಮ್ಮ ಸರ್ಕಾರ ೪೯೦ ರೂಪಾಯಿಗಳಿಗೆ ಏರಿಸಿದ್ದಾರೆ. ಇದು ಹೆಚ್ಚುಕಡಿಮೆ ಒಬ್ಬ ಎಸ್.ಡಿ.ಸಿ.ಗೆ ಸಿಕ್ಕುವ ವೇತನವಾಗಿದೆ. ಇವರು ವಯೋಮಿತಿಯ ಚಿಂತನೆಗೆ ಒಳಗಾಗಿದ್ದರು. ವಯೋಮಿತಿಯ ರಿಯಾಯಿತಿಯನ್ನು ಸಹ ತೋರಿಸಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಇವರಿಗೆ ೪೯೦ ರೂಪಾಯಿಗಳ ಸಂಬಳವನ್ನು ಕೊಡುವಂತಿದ್ದರೂ ಕೂಡ ಇವರಿಗೆ ಹೆಚ್ಚು ಕೆಲಸವನ್ನು ತೆಗೆದುಕೊಂಡಿದ್ದೇವೆ. ಸ್ಟೈಫೆಂಡರಿ ಪದವೀಧರರು ಐ. ಆರ್. ಡಿ. ಪಿ. ಪಟ್ಟಿಯನ್ನು ಮಾಡಿದ್ದಾರೆ. ಲಕ್ಷಾಂತರ ಹಸಿರು ಕಾರ್ಡನ್ನು ಬರೆದಿದ್ದಾರೆ. ಈ ಕೆಲಸಗಳನ್ನು ಯಾರೂ ಮಾಡುವುದಕ್ಕೆ ಸಿದ್ಧರಿರಲಿಲ್ಲ. ಕರ್ನಾಟಕದ ತುಂಬಾ ಹಸಿರು ಕಾರ್ಡನ್ನು ಕೊಡುವಂತಹ ಕಾರ್ಯವನ್ನು ಈ ಸ್ಟೈಫೆಂಡರಿ ಪದವೀಧರರು ಮಾಡಿದ್ದಾರೆ. ನಾವು ಇವರನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದೇವೆ. ಎಲ್ಲರಿಗೂ ಆಸೆ ಆಕಾಂಕ್ಷೆಗಳು ಇರುತ್ತವೆ, ಆದರೆ ಈಗ ಇವರನ್ನು ಖಾಯಂ ಮಾಡಬೇಕೆಂಬ ಪ್ರಶ್ನೆ ಇದೆ. ಇವರ ವಿಚಾರವಾಗಿ ಮಾನ್ಯ ಬಸವಲಿಂಗಪ್ಪನವರು, ಮತ್ತಿತರ ಸದಸ್ಯರು ಹೇಳಿದರು ಹಿಂದೆ ಯಾರಿಗೋ ಗದೆ ಕೊಟ್ಟರು, ಆ ಗದೆಯನ್ನು ತೆಗೆದುಕೊಂಡವರು ಇವತ್ತು ಇಲ್ಲ. ಅವರು ಈ ಪದವೀಧರರನ್ನು ಭೇಟಿ ಮಾಡಲಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ವಿಳಂಬವಾಗಿ ಬಿಡತಕ್ಕದ್ದಲ್ಲ. ಇದರಲ್ಲಿ ಕಾನೂನಿನ ಪ್ರಶ್ನೆ ಬಹಳ ಮುಖ್ಯವಲ್ಲ. ಮಾನವೀಯತೆ ಪ್ರಶ್ನೆ ಇದೆ. ಆ ಒಂದು ಮಾನವೀಯತೆ ಪ್ರಶ್ನೆ ಮೇಲೆ ಹಿರಿಯ ಸಮಿತಿ ನೇಮಿಸಿ, ಇವರಿಗೆ ನೆಮ್ಮದಿ ಸಿಗುವ ರೀತಿಯಲ್ಲಿ ಖಾಯಂ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನೋಡುವುದಕ್ಕೆ ಬಹಳ ಸಿಂಪಲ್ ಆಗಿದ್ದರೂ, ಬಹಳ ಗಂಭೀರವಾದ ಪ್ರಶ್ನೆ. ಇದರಲ್ಲಿ ಏನಾಗಿದೆ ಎಂದರೆ, ಈ ಸ್ಟೈಫೆಂಡರಿ ಪದವೀಧರರ ಬಗ್ಗೆ ಮಾತನಾಡಲು ಇವತ್ತು ಪೈಪೋಟಿ ನಡೆದಿದೆ. ಇದು ನಮ್ಮ ಪಕ್ಷದವರು ಹೇಳುತ್ತಿದ್ದಾರೆ ನಿಮ್ಮ ಪಕ್ಷದವರೂ ಹೇಳುತ್ತಿದ್ದಾರೆ. ಇದರ ಹಿನ್ನೆಲೆ ಏನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಈ ವಿಚಾರದ ಬಗ್ಗೆ ಕೆಲವು ಜನ ನಿಷ್ಠೂರವಾಗುತ್ತಾರೆ. ನಾಳೆ ಅವರ ಪರವಾಗಿ ಮಾತನಾಡದೇ ಹೋದರೆ, ಹೊರಗಡೆ ನಮ್ಮನ್ನು ಹಿಡಿದು ಕೇಳುತ್ತಾರೆ ಎಂಬ ಶಂಕೆ ಇದೆ. ಇದರ ಹಿನ್ನೆಲೆಯನ್ನು ಅರ್ಥಮಾಡಿಕೊಂಡು, ಯಾರಿಗೆ ಇದರಿಂದ ಸಹಾಯವಾಗುತ್ತದೆ, ಯಾರಿಗೆ ಅನಾನುಕೂಲವಾಗುತ್ತದೆ, ಎಂಬ ವಿಚಾರಗಳನ್ನು ಸವಿಸ್ತಾರವಾಗಿ ತಿಳಿಯದೇ ಏನಾದರೂ ಹರಿಬಿರಿಯಲ್ಲಿ ಮಾಡಿದರೆ, ಇದರಿಂದ ಬೇರೆಯವರಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ಮರೆಯಬಾರದು. ಮಾನವೀಯತೆ ದೃಷ್ಟಿಯಿಂದ, ಸಹಾಯ ಮಾಡಬೇಕೆಂಬುದನ್ನು ಅರಿತು, ಕಾರ್ಯಕ್ರಮ ಕೈಗೊಳ್ಳಬೇಕು.

೨—೦೦ ಪಿ.ಎಂ.

ಹಾಗೆ ನೀವು ಮಾಡಿದ್ದೀರಿ, ಹೀಗೆ ನೀವು ಮಾಡಿದ್ದೀರಿ ಎಂದು ಕಥೆ ಕಟ್ಟುವುದಲ್ಲ. ಇದರ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕು. ಯಾವ ಹಿನ್ನೆಲೆಯ ಕೆಳಗೆ ಶ್ರೀಮಾನ್ ದೇವರಾಜ ಅರಸು ಅವರು ೧೯೭೭ರಲ್ಲಿ ಈ ಒಂದು ಸ್ಕೀಮ್ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಹಿಂದುಳಿದ ವರ್ಗಗಳಲ್ಲಿ, ಪರಿಶಿಷ್ಟ ಜಾತಿಯಲ್ಲಿ ಅನ್‌ಎಂಪ್ಲಾಯ್ಡ್ ಆಗಿ ಉಳಿದಿರತಕ್ಕಂಥ ಅನೇಕ ಜನ ಗ್ರಾಜುಯೇಟ್ಸ್ ಏನಿದ್ದಾರೆ, ಹಾಗೂ ವಾರ್ಷಿಕ ೩,೬೦೦ ರೂಪಾಯಿಗಿಂತ ಕಡಿಮೆ ಆದಾಯ ಯಾರದ್ದು ಇದೆ, ಅಂತಹ ಕುಟುಂಬಗಳಲ್ಲಿ ಗ್ರಾಜುಯೇಟ್ಸ್ ಇದ್ದರೆ, ಅವರು ಕನಿಷ್ಠ ಪಕ್ಷ ಒಂದು ಸ್ವಾಭಿಮಾನದಿಂದಲಾದರೂ ಬದುಕಲಿ ಎಂದು ಹೇಳಿ, ಅವರಿಗೆ ತಿಂಗಳಿಗೆ ೧೫೦ ರೂಪಾಯಿಗಳನ್ನಾದರೂ ಕೊಡಬೇಕು, ಎಂಪ್ಲಾಯ್‌ಮೆಂಟ್ ಅಪ್ರೋಚ್ಯುನಿಟಿ ಬಂದಾಗ ಅವರನ್ನು ಖಾಯಂಗೊಳಿಸಬೇಕು, ಅವರಿಗೆ ಇಂಟರ್‌ವ್ಯೂ ಬರುವವರೆಗೆ ಇದೇ ರೀತಿ ಕಂಟಿನ್ಯೂ ಮಾಡಬೇಕೆಂದು ಹೇಳಿ ಇದು ಪ್ರಾರಂಭ ಆಯಿತು. ತಾವು ಈಗ ಅವರಿಗೆ ಖಾಯಂ ಮಾಡಲು, ರೆಗ್ಯುಲರ್ ರೆಕ್ರೂಟ್‌ಮೆಂಟ್ ಮಾಡಿ, ಖಾಯಂ ಮಾಡುತ್ತಿದ್ದೀರಿ. ನಾವೂ ಮಾಡುತ್ತಿದ್ದೆವು, ಆದರೆ ನಮ್ಮ ಕೈಯಲ್ಲಿ ಆಗ ಆಗಲಿಲ್ಲ. ಇವತ್ತು ನೀವು ಎಲ್ಲಾ ಮಾಡುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದೀರಿ, ಹಾಗಿದ್ದರೆ ತಾವು ೧೯೮೩ರಲ್ಲಿ ಇವರನ್ನೆಲ್ಲಾ ಖಾಯಂ ಮಾಡಬಹುದಾಗಿತ್ತು. ಎಂಟು ವರ್ಷದಿಂದ ಈ ಸಮಸ್ಯೆ ಪೋಸ್ಟ್‌ಪೋನ್ ಆಗುತ್ತಾ ಬಂದಿದೆ. ಇದಕ್ಕೆ ಏನು ಕಾರಣ ಇರಬಹುದು ಎಂಬುದನ್ನು ಯೋಚನೆ ಮಾಡಬೇಕು. ಇವರ ಸಂಖ್ಯೆ ಬೆಳೆಯುತ್ತಾ ಹೋಯಿತು. ಎರಡು ಸಾವಿರ ಇದ್ದುದು ಹೋಗಿ ಹದಿನಾಲ್ಕು ಸಾವಿರ ಆಯಿತು. ಈಗ ಒಂಬತ್ತು ಸಾವಿರಕ್ಕೆ ಇಳಿದಿದೆ. ಈ ಒಂಬತ್ತು ಸಾವಿರ ಜನರ ಸಮಸ್ಯೆಯನ್ನು ಯಾವ ರೀತಿಯಾಗಿ ಬಗೆಹರಿಸಬೇಕೆಂಬ ಪ್ರಶ್ನೆ ಬಂದಾಗ, ಕಾನೂನು ದೃಷ್ಟಿಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ನೋಡಬೇಕು. ಕಾನೂನು ದೃಷ್ಟಿಯಿಂದ ಇದು ವಿರೋಧ ಆಗಬಾರದು. ಈ ದೃಷ್ಟಿಯಿಂದ ಇದನ್ನು ಮಾಡಬೇಕಾದರೆ, ಯಾವರೀತಿ ಮಾಡಬೇಕು? ಹಿಂದೆ ನಾನು ಶಿಕ್ಷಣ ಇಲಾಖೆಯಲ್ಲಿ ಎರಡು ವರ್ಷ ಮಂತ್ರಿಯಾಗಿ ಕೆಲಸ ಮಾಡಿದ್ದೆ, ೧೯೭೨ ರಿಂದ ೧೯೭೪ ರವರೆಗೆ, ಅಧ್ಯಕ್ಷರೇ, ನಾನು ಸಹ ತಮ್ಮ ಜೊತೆಯಲ್ಲಿಯೇ ಇದ್ದೆ. ಆಗ ನಾವು ಅನೇಕ ಸಂಖ್ಯೆಯ ಜನರಿಗೆ ಕೆಲಸ ಕೊಟ್ಟಿದ್ದೇವೆ. ಆಗ ಇದ್ದ ಸುಮಾರು ೧,೧೦,೦೦೦ ಪ್ರೈಮರಿ ಸ್ಕೂಲ್ ಟೀಚರ್ಸ್‌ನಲ್ಲಿ ಎಸ್. ಸಿ. ಜನ ಕೇವಲ ನಾಲ್ಕು ಸಾವಿರ ಮಾತ್ರ ಇದ್ದರು. ಇವರಿಗೆ ೧೮ ಪರ್‌ಸೆಂಟ್ ರಿಸರ್ವೇಷನ್ ಏನು ಇಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಲೆಕ್ಕ ಹಾಕಿದರೆ ಇನ್ನೂ ೨೦ ಅಥವಾ ೨೧ ಸಾವಿರ ಜಾಗಕ್ಕೆ ಸಿಗಬೇಕಾಗಿತ್ತು. ಈ ೨೧—೨೨ ಸಾವಿರ ಜನರಲ್ಲಿ ಅವರು ಇದ್ದವರು ಎಷ್ಟು ಜನ ಎಂದರೆ, ಕೇವಲ ೪—೫ ಸಾವಿರ ಜನ ಮಾತ್ರ ಶಿಕ್ಷಕರಾಗಿದ್ದರು. ಇದನ್ನು ತುಂಬುವುದಕ್ಕೆ ಹೇಗೆ ಪ್ರಯತ್ನಿಸಬೇಕು ಎಂದರೆ, ಅದನ್ನು ನಾನು ಹೇಳುತ್ತೇನೆ. ಹಿಂದೆ ಶಿಕ್ಷಕರಿಗೆ ಟಿ.ಸಿ.ಹೆಚ್., ಬಿ.ಎಡ್. ಆಗಿರಬೇಕೆಂದೇನೂ ಇರಲಿಲ್ಲ. ಎಸ್.ಎಸ್.ಎಲ್.ಸಿ. ಆದರೆ ಏಳನೇ ತರಗತಿಯವರೆಗೆ ಪಾಠ ಹೇಳುವುದಕ್ಕೆ ಟೀಚರ್ ಎಂದು ಕೊಡುತ್ತಿದ್ದರು. ಕಾಲಾನಂತರದಲ್ಲಿ ಇನ್‌ಸ್ಟಿಟ್ಯೂಷನ್‌ಗಳು ಬೆಳೆದವು. ಒಂದು ರೆಕ್ರೂಟ್‌ಮೆಂಟ್ ಪಾಲಿಸಿ ಮಾಡಿದರು. ರೂಲ್ಸ್‌ಗೆ ಅಮೆಂಡ್‌ಮೆಂಟ್ ತಂದರು. ಅವರವರ ಸಂಸ್ಥೆಗಳೇ ಇದ್ದವು ಅವರಿಗೆ ಬೇಕಾದಂಥವರು ಇದ್ದರು, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿದರು. ಎಸ್.ಎಸ್.ಎಲ್.ಸಿ. ಜೊತೆಗೆ ಟಿ.ಸಿ.ಹೆಚ್ ಇರಬೇಕೆಂದು ಮಾಡಿದರು. ಗ್ರಾಜುಯೇಷನ್ ಜೊತೆಗೆ ಬಿ. ಎಡ್. ಇರಬೇಕು ಎಂದರು. ಕೆಳಗಿನ ಸಮಾಜದಲ್ಲಿ ಬಿ. ಎಡ್. ಮತ್ತು ಟಿ.ಸಿ.ಹೆಚ್. ಓದಿದವರು ಒಬ್ಬರೂ ಇರಲಿಲ್ಲ. ರೆಕ್ರೂಟ್‌ಮೆಂಟ್ ಮಾಡುವಾಗ ಟಿ.ಸಿ.ಹೆಚ್., ಬಿ.ಎಡ್. ಇದ್ದವರು ಮಾತ್ರ ರೆಕ್ರೂಟ್ ಆದರು. ಉಳಿದವರಿಗೆ ಅವಕಾಶ ಇಲ್ಲ. ೧೮ ಅಲ್ಲ ೨೫ ಪರ್ಸೆಂಟ್ ರಿಸರ್ವೇಷನ್ ಕೊಟ್ಟರೂ ಸಿಗಲಿಲ್ಲ. ರೋಸ್ಟರ್ ಪ್ರಕಾರ ಟಿ.ಸಿ.ಹೆಚ್., ಬಿ.ಎಡ್. ಇದ್ದವರು ಇರಲೇ ಇಲ್ಲ. ಹೀಗೆ ಅಮೆಂಡ್‌ಮೆಂಟ್ ಮಾಡಿ ಅವರನ್ನು ಬ್ಲಾಕ್ ಮಾಡಿದರು. ಇದೇ ರೀತಿ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿ ಡೈರೆಕ್ಟ್ ಆಗಿ ತೆಗೆದುಕೊಳ್ಳುತ್ತಿದ್ದರು. ರೆಕ್ರೂಟ್‌ಮೆಂಟ್ ಮಾಡುವುದಿಲ್ಲ, ರೋಸ್ಟರ್ ಫಾಲೋ ಮಾಡುವುದಿಲ್ಲ, ನೇರವಾಗಿ ಅಪಾಯಿಂಟ್‌ಮೆಂಟ್ ಮಾಡುವುದು ನಡೆಯಿತು. ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಯಾರು ಇರುತ್ತಾರೆ ಅವರಿಗೆ ಬೇಕಾದಂಥ ಜನ ಅವರ ಜಾತಿಯ ಜನ ಮುಖ್ಯವಾಗಿ ಸೇರತಕ್ಕವರಾದರು. ಮಂತ್ರಿಗಳು ಇರಬಹುದು, ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ ಇರಬಹುದು, ಹೆಚ್ಚಾಗಿ

೬೦ ರಿಂದ ೭೦ ಪರ್ಸೆಂಟ್‌ವರೆಗೆ ಅವರಿಗೆ ಬೇಕಾದವರಿಗೆ ಸೇರಿಸುತ್ತಿದ್ದರು. ಹೀಗಾಗಿ ರಿಸರ್ವೇಷನ್ ಪಾಲಿಸಿ ಡ್ವಿಂಡ್ಲಿಂಗ್ ಆಯಿತು. ರೆಕ್ರೂಟ್‌ಮೆಂಟ್ ಕಡಿಮೆ ಆಯಿತು ಸ್ಟೈಫಂಡರಿ ಗ್ರಾಜುಯೇಟ್ಸ್‌ನ್ನು ತೆಗೆದುಕೊಂಡಾಗ, ಕಂಪ್ಯಾಷನೇಟ್ ಗ್ರೌಂಡ್ಸ್ ಮೇಲೆ ಕೊಡಬೇಕು, ಇಂಟರ್‌ವ್ಯೂ ಬಂದು ಖಾಯಂ ಆಗುವವರೆಗೆ ಇದೇ ರೀತಿ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ, ಕಾಂಗ್ರೆಸ್ ಸರಕಾರ ಇದೇ ರೀತಿ ಮಾಡಿತು, ಜನತಾ ಸರಕಾರ ಸಹ ಅದೇ ರೀತಿ ಮಾಡುತ್ತಿದೆ. ನಾವು ಖಾಯಂ ಮಾಡುತ್ತೇವೆಂದು ಇವತ್ತಾದರೂ ಹೇಳಲಿ ನೋಡೋಣ. ಹಿಂದೆ ಇವರಿಗೆ ೧೫೦ ರೂಪಾಯಿ ಕೊಡುತ್ತಿದ್ದುದನ್ನು ೩೦೦ ರೂಪಾಯಿ ಮಾಡಿರಬಹುದು, ಅದೇನೂ ದೊಡ್ಡ ಮಾತಲ್ಲ. ಈ ರೀತಿಯಾದ ಒಂದು ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿ ಬಂದಮೇಲೆ ಬಹುಶಃ ಸರಕಾರದವರು ಯೋಚನೆ ಮಾಡಿದರು, ಇವರನ್ನು ಖಾಯಂ ಮಾಡಿದರೆ, ರೋಸ್ಟರ್ ಸಿಸ್ಟಮ್‌ಗೆ ಧಕ್ಕೆ ಬರುತ್ತದೆ. ಅದಕ್ಕೆ ನಾವು ಇವರನ್ನು ಇದೇ ರೀತಿ ಮುಂದುವರಿಸಿ ರೆಕ್ರೂಟ್‌ಮೆಂಟ್ ಮಾಡುವಾಗ ಕನಿಷ್ಟ ಪಕ್ಷ ೫೦ ಪರ್ಸೆಂಟ್ ಇವರಿಗೆ ಪ್ರಿಫರೆನ್ಸ್ ಕೊಟ್ಟು ರೆಕ್ರೂಟ್‌ಮೆಂಟ್ ಮಾಡಬೇಕೆಂಬ ದೃಷ್ಟಿಯಿಂದ ಈಗಿರುವ ರೀತಿ ಮಾಡಿದರು. ಇದರಿಂದ ರಿಸರ್ವೇಷನ್‌ಗೆ ತೊಂದರೆಯಾಗುತ್ತದೆ ಎಂದು ಕಂಡುಬಂದರೂ ಕೂಡಾ, ೫೦ ಪರ್ಸೆಂಟ್ ಕೊಡಬೇಕೆಂಬ ದೃಷ್ಟಿಯಿಂದ ತಾವು ಈ ರೀತಿ ಮಾಡಿ ಕೆಲವು ಜನರನ್ನು ರೆಕ್ರೂಟ್‌ಮೆಂಟ್ ಮಾಡಿದ್ದೀರಿ. ಇನ್ನೂ ೯ ಸಾವಿರ ಜನ ಉಳಿದಿದ್ದಾರೆ. ಇವರನ್ನು ನೇರವಾಗಿ ಖಾಯಂ ಮಾಡುವುದರಿಂದ ರೋಸ್ಟರ್ ಸಿಸ್ಟಮ್‌ಗೆ ಧಕ್ಕೆ ಬರುತ್ತದೆ ಎಂಬ ದೃಷ್ಟಿಯನ್ನು ನಾವು ವ್ಯಕ್ತಪಡಿಸಿದ್ದೇವೆ. ಇವತ್ತು ಇವರನ್ನು ಖಾಯಂ ಮಾಡಬೇಕಾದರೆ ಒಂದೇ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಬೇಕು. ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಬೇಕಾಗುತ್ತದೆ. ಹೇಗೆ ಎಂದರೆ, ಇದರಲ್ಲಿ ಯಾರು ರೋಸ್ಟರ್ ಪ್ರಕಾರ ಬರುತ್ತಾರೆ ಅವರನ್ನೇ ತೆಗೆದುಕೊಳ್ಳಿ ಬೇರೆಯವರಿಗೆ ಏನು ವೇಟೇಜ್ ಕೊಡುತ್ತೀರಿ, ಆ ವೇಟೇಜನ್ನು ಉಳಿದಂಥ ಜನರಿಗೆ, ಕೊಡಿ. ಡಿಪ್ರೈವ್ಡ್ ಕ್ಲಾಸಸ್ ಏನು ಇವೆ. ವೀಕರ್ ಸೆಕ್ಷನ್ ಏನು ಇವೆ, ಅವರಿಗೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಹೀಗೆ ಮಾಡದಿದ್ದರೆ ೧೮ ಪರ್ಸೆಂಟ್ ಫಿಲಪ್ ಆಗುವುದಿಲ್ಲ ಎಂದು ಹೇಳಿ ನಾವು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿದೆವು. ಓನ್ಲಿ ಎಸ್.ಸಿ.ಗೆ ರೆಕ್ರೂಟ್‌ಮೆಂಟ್ ಮಾಡಿ, ೭ ಸಾವಿರ ಜನರನ್ನು ಟಿ.ಸಿ ಹೆಚ್. ಬಿ.ಎಡ್. ಎಕ್ಸಾಮಿನೇಷನ್ ಆಗದೇ ಇದ್ದರೂ ತೆಗೆದುಕೊಂಡು, ಆಮೇಲೆ ಅವರನ್ನು ಟ್ರೈನಿಂಗ್‌ಗೆ ಕಳುಹಿಸಲಿಕ್ಕೆ ಮಾಡಿದ್ದು ಇದೆ. ಹೀಗೆ ಇವತ್ತು ನೀವು ಮಾಡಬೇಕೆಂದರೆ ದಾರಿ ಇದೆ, ಹುಡುಕಿ, ನಾನು ಸಲಹೆ ಕೊಡುತ್ತೇನೆ. ನೀವು ಇವರಿಗೆ ಖಾಯಂಗೊಳಿಸಬೇಕಾದರೆ ಎಷ್ಟು ಪೋಸ್ಟ್ ಇವರಿಗೆ ಸಿಗುತ್ತದೆ ಈ ಬ್ಯಾಕ್‌ವರ್ಡ್ ಕ್ಲಾಸಸ್, ವೀಕರ್ ಸೆಕ್ಷನ್ಸ್‌ಗೆ ಇರುತ್ತದೆ, ಅವರ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿ ಖಾಯಂ ಮಾಡಿ. ಬೇರೆಯವರಿಗೆ ರೆಕ್ರೂಟ್‌ಮೆಂಟ್ ಮಾಡಿ ಖಾಯಂ ಗೊಳಿಸಿ, ಇದಕ್ಕೆ ಯಾರದ್ದೂ ಅಭ್ಯಂತರ ಇಲ್ಲ. ಹಿಂದೆ ಒಂದು ಮಾತನಾಡಿ ಅವರನ್ನು ಸಮಾಧಾನ ಪಡಿಸುವುದಕ್ಕೆ ನಾವು ಒಂದು ಹೇಳುವುದು, ನೀವು ಒಂದು ಹೇಳುವುದು ಅಲ್ಲ, ಪ್ಲಾಟ್‌ಫಾರಂ ಮೇಲೆ ನಿಂತು ಪಾಪ್ಯುಲಾರಿಟಿಗೋಸ್ಕರ ಸ್ಟೇಟ್‌ಮೆಂಟ್ ಕೊಟ್ಟರೆ, ಸಮಸ್ಯೆ ನಿಜವಾಗಿ ಬಗೆಹರಿದಹಾಗೆ ಆಗುವುದಿಲ್ಲ. ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ. ಅವರಿಗೆ ಪರಿಹಾರ ಕೊಡತಕ್ಕದು ಒಂದು ಕಡೆ ಮಾಡಿ, ಇನ್ನೊಂದು ಕಡೆ ಈ ವೀಕರ್ ಸೆಕ್ಷನ್ಸ್‌ಗೆ ಖಾಯಂ ಮಾಡಿ. ಇವರನ್ನು ಸಂಪೂರ್ಣವಾಗಿ ಖಾಯಂಗೊಳಿಸಬೇಕಾದರೆ ಇದನ್ನು ಗಮನದಲ್ಲಿಟ್ಟುಕೊಂಡು ಮಾಡಿದರೆ ಇವರನ್ನು ಖಾಯಂಗೊಳಿಸಿದಹಾಗೆ ಆಗುತ್ತದೆ. ಇಲ್ಲದೇ ಹೋದರೆ ತೊಂದರೆಯಾಗುತ್ತದೆ ಹಾಗೂ ಕಾನೂನಿಗೆ ವಿರೋಧವಾಗುತ್ತದೆ. ಆಮೇಲೆ ಯಾವ ಜನರಿಗೆ ಅನುಕೂಲ ಆಗುತ್ತಿಲ್ಲ, ಯಾವ ಜನರು ತಮಗೆ ಆದಂಥ ಅನ್ಯಾಯವನ್ನು ಹೇಳಿಕೊಳ್ಳುವುದಿಲ್ಲ, ಆ ಜನರಿಗೆ ಅನುಕೂಲ ಮಾಡಬೇಕಾದುದು ತಮ್ಮ ಕರ್ತವ್ಯ ಇದೆ ಹಾಗೂ ತಮ್ಮ ಜವಾಬ್ದಾರಿ ಇದೆ. ಯಾವ ಜನ ರೆಪ್ರೆಸೆಂಟ್ ಮಾಡುವುದಿಲ್ಲ, ಯಾವ ಜನ ತಮ್ಮ ಹತ್ತಿರ ಬಂದು ಹೇಳುವುದಿಲ್ಲ ಹೇಳತಕ್ಕಂಥ ಶಕ್ತಿ ಇಲ್ಲ, ಅವರ ಬಗ್ಗೆ ತಾವು ಯೋಚನೆ ಮಾಡಿ, ನಿರ್ಣಯ ತೆಗೆದುಕೊಳ್ಳಬೇಕು. ಯಾವುದೇ ಪ್ರೆಜರ್‌ಗೆ ಈಲ್ಡ್ ಆಗಬಾರದು. ಅನ್ಯಾಯ ಮಾಡುವುದಕ್ಕೆ ಹೋಗಬಾರದು ಎಂದು ಹೇಳುತ್ತೇನೆ. ಇವರನ್ನು ಖಾಯಂ ಮಾಡುವಾಗ ನಾನು ಹೇಳಿದ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ.ರಾಜೂಗೌಡ (ಹನೂರು)–.ಸಭಾಧ್ಯಕ್ಷರೇ, ಇದುವರೆಗೂ ಕೂಡಾ ಮಾನ್ಯ ಸದಸ್ಯರೆಲ್ಲರೂ ಮಾತನಾಡಿರತಕ್ಕ ವಿಷಯ ಕೇಳಿದ್ದೇನೆ. ನಾನು ಸರಕಾರವನ್ನು ನೇರವಾಗಿ ಪ್ರಶ್ನೆ ಮಾಡುವುದಕ್ಕೆ

ಇಚ್ಛೆಪಡುತ್ತೇನೆ. ಸಮಾನ ಕೆಲಸಕ್ಕೆ ಸಮಾನವೇತನ ಎಂದು ಘೋಷಣೆ ಮಾಡಿರತಕ್ಕ ಸರಕಾರ ಸ್ಟೈಫೆಂಡಿಯರಿ ಪದವೀಧರರ ವಿಷಯದಲ್ಲಿ ಅದೇ ರೀತಿ ನಡೆದುಕೊಳ್ಳಬೇಕು. ಈ ಸ್ಟೈಫೆಂಡಿಯರಿ ಪದವೀಧರರನ್ನು ಯಾವ ಕೆಲಸಕ್ಕೆ ನಿಯೋಜಿಸಿದರೂ ಕೂಡಾ, ಆ ಕೆಲಸಕ್ಕೆ ಎರಡು ಸಾವಿರ ರೂಪಾಯಿ ವೇತನ ಇದ್ದರೂ ಕೂಡಾ ಇವರು ತಮಗೆ ಕೊಡುತ್ತಿರುವ ದಂಡಿಗೆ. ಆ ಕೆಲಸವನ್ನು ಭಯಭಕ್ತಿಯಿಂದ ಮಾಡುತ್ತಿದ್ದಾರೆ. ನಮ್ಮ ಕೆಲಸ ಖಾಯಂ ಆಗದೇ ಹೋಗುತ್ತದೆ. ಸರಕಾರಿ ಅಧಿಕಾರಿಗಳು ಸರಕಾರಕ್ಕೆ ದೂರು ಸಲ್ಲಿಸಿ ನಮ್ಮನ್ನು ಕೆಲಸದಿಂದ ತೆಗೆದುಬಿಡುತ್ತಾರೆ ಎಂಬ ಭಯದಿಂದ ಅವರು ಕಾಯಾವಾಚಾ ಮನಸಾಸ್ಮೃತ್ಯವಾಗಿ ಕೆಲಸ ಮಾಡುತ್ತಿದ್ದಾರೆ. ಸ್ತುತ್ಯಾರ್ಹವಾಗಿ ಕೆಲಸ ಮಾಡುತ್ತಿರುವ ಒಂಬತ್ತು ಸಾವಿರ ಸ್ಟೈಫೆಂಡಿಯರಿ ಪದವೀಧರರ ಆಗುಹೋಗುಗಳ ಬಗ್ಗೆ ಸರಕಾರ ಯೋಚನೆ ಮಾಡಬೇಕು. ನಮ್ಮ ಜನತಾ ಸರಕಾರ ಬಡವರಿಗಾಗಿ ಅನೇಕ ರೀತಿಯ ಯೋಜನೆಗಳನ್ನು ಹಾಕಿಕೊಂಡಿದೆ. ಸೀರೆಪಂಚೆ ಹಂಚುವುದು, ತಾಳಿ ಕೊಡತಕ್ಕದ್ದು. ಅನೇಕವಿಧವಾದ ಪೆನ್‌ಷನ್ ಕೊಡತಕ್ಕದ್ದು, ಇನ್ನೂ ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ೬೦ನೇ ಹುಟ್ಟುಹಬ್ಬದ ಅಂಗವಾಗಿ ೯ ಸಾವಿರ ಸ್ಟೈಫೆಂಡರಿ ಪದವೀಧರರಿಗೆ ಖಾಯಂ ಮಾಡಬೇಕು. ೬೦ನೇ ಹುಟ್ಟುಹಬ್ಬದದಿವಸ ಅನೇಕ ಜನ ಪದವಿಧರರು ಇಲ್ಲಿ ಏನು ಬಂದಿದ್ದಾರೆ. ಅವರಿಗೆ ಕೆಲಸವನ್ನು ಖಾಯಂ ಮಾಡಿಕೊಡಬೇಕು, ಎಂದು ಕೇಳಿಕೊಳ್ಳುತ್ತೇನೆ ಅವರು ಅನೇಕ ಜನ ಅಂಗಡಿಗಳಲ್ಲಿ ಸಾಲ ಮಾಡಿ ಕಷ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಅನೇಕ ಜನ ಸಾಲ ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆ. ಅವರ ಕಷ್ಟಗಳನ್ನು ಪರಿಹಾರ ಮಾಡುವಂತಹ ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಹುಟ್ಟುಹಬ್ಬದ ದಿವಸ ಇಂತಹ ಒಳ್ಳೆಯ ಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸರಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇವರನ್ನು ಖಾಯಂ ಮಾಡಿ.

SRI MOHAMMED LIAQUDDIN (Bidar).—Mr. Speaker, Sir, the problem of Stipendiary graduates is hanging fire since last eight years. It is not a problem of Congress Party or a problem of Janata party. Most of them have become age barred and most of them have even married and have 2–3 chidren. The salary what they are getting now is insufficient in these hard days of spiralling prices. Their problem should be solved immediately. This year also should not pass away like the last one. I remember here a very old known couplet from the Urdu poem of Urdu writer Mir. It is like this,

"हर साल हस्बे हाल, ये मिसरा
है मीर का अब के भी दिन
बहार के यूंहि गुजर गये"

The literal translation of the above couplet in English reads thus :

> "Every year, as usual, this is the saying of Mir, this time also the days of spring and bloom have passed away without any fruit".

At least now something should be done by the Government to settle their demands. It should be considered seriously on humanitarian grounds It is a question of nine thousand graduates, Persons belonging to all castes and communities are there. The

roster system will certain affect as my hon'ble friend Mr. B. Basavalingappa has stated. But this problem should be sorted out and some solution should be found out. Justice should be done to all the persons. If the State Government takes this matter very seriously this problem could be solved. Last year forty thousand vacancies were there and there is demand from various departments for creation of vacancies. Where there is a will there is a way. I would like to make a suggestion here. The Public Service Commission may be asked to reserve 50 percent of the vacancies to these candidates this year. They should be absorbed systematically without prejudicing the interest of Scheduled Castes, Scheduled Tribes and minority Communities. With these words I conclude my speech and I thank the Hon'ble Speaker for having given me an opportunity to say a few words. Thank you.

SMT. MUKTHARUNNISA (Narasimharaja).—Mr. Speaker, Sir, I thank you for giving me an opportunity to speak. I request the concerned Minister to take immediate action to solve the problems of these poor stipendiary graduates. They are working from the last nine years and they should be absorbed permanently. They are now losing seniority, They are losing the increments. They are getting a fixed consolidated salary of Rs 490/- During these nine years so many of them have married and they have get children also. Some employees are aged persons. They are graduates and they have spent fifteen years to become graduates. ಚಳವಳಿ ಮಾಡಬಾರದು ಎಂದು ಇವರು ಹೇಳುತ್ತಾರೆ, ಸರ್ಕಾರಿ ನೌಕರರಿಗೆ ಗವರ್ನಮೆಂಟ್ ಅಫಿಶಿಯಲ್ ಅನ್ಯಾಯ ಆದರೆ ಅವರು ಏನು ಮಾಡಬೇಕು ?, ಚಳುವಳಿ ಮಾಡಬಾರದೆ ? ಯಾರಿಗಾದರು ತೊಂದರೆ ಆದರೆ ಆಗ ಮಾತ್ರ ಅವರು ಅನಿವಾರ್ಯವಾಗಿ ಚಳುವಳಿ ಮಾಡುತ್ತಾರೆ. ಇಪ್ಪತ್ತು ವರ್ಷಗಳ ಮುಂಚೆ ಕೇಳಿದ ಒಂದು ಕತೆಯು ನೆನಪು ಬರುತ್ತಾ ಇದೆ, ಗಿಣಿ ಹಾಗೆ ಸಾಕುತ್ತೇನೆ, ಚಿನ್ನ ಕೊಡುತ್ತೇನೆ ಬೆಳ್ಳಿಕೊಡುತ್ತೇನೆ ಎಂದೆಲ್ಲಾ ಹೇಳಿ ಏನೂ ಕೊಡಲಿಲ್ಲ......You are like a father to those people. They are suffering to the maximum extent. Today hon'ble member Sri Narayankumar was distributing sweets and he said that today is the birth day of the hon'ble Chief Minister. On this happy day I request the Government and the Hon'ble Chief Minister to give some good news to these poor stipendiary graduates. Please give them assurance that immediately action will be taken. Please declare it today Thank you.

ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).— ಮಾನ್ಯ ಅಧ್ಯಕ್ಷರೇ, ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್ ಗಳ ಬಗ್ಗೆ ಈ ಕಡೆಯ ನಮ್ಮ ಸ್ನೇಹಿತರುಗಳು ಹಾಗೂ ಆ ಕಡೆಯ ನಮ್ಮ ಸ್ನೇಹಿತರುಗಳೆಲ್ಲಾ ಸಾಕಷ್ಟು ಮಾತನಾಡಿದ್ದಾರೆ. ಸ್ಟೈಫೆಂಡರಿ ಗ್ರ್ಯಾಜುಯೇಟ್‌ಗಳ ಸ್ಥಿತಿಯನ್ನು ನೋಡಿ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಮಾವ ಮತ್ತು ಅಳಿಯ ಇಬ್ಬರೂ ಕೂಡ ಈ ಸ್ಟೈಪೆಂಡರಿ ಗ್ರಾಜುಯೇಟ್ ಸ್ಕೀಮ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. ವಯಸ್ಸಾಗಿ ಪೂರ್ತಿ ಹಲ್ಲುಗಳು ಕೂಡ ಉದುರಿ ಹೋಗುವ ಪರಿಸ್ಥಿತಿಗೆ ಈ ಸ್ಟೈಪೆಂಡರಿ ಗ್ರ್ಯಾಜುಯೇಟ್‌ಗಳು ತಲುಪಿದ್ದಾರೆ. ಇವತ್ತು ಅವರುಗಳನ್ನು ತಾತ್ಸಾರವಾಗಿ

ಕಂಡು ಅವರಿಗೆ ತೊಂದರೆ ಮಾಡುವುದು ಸರಿಯಲ್ಲ. ಅವರ ಬಗ್ಗೆ ಚಿಂತನೆ ಮಾಡದೇ ಹೋದರೆ ಅವರಿಗೆ ನೋವಾಗುತ್ತದೆ. ನಮ್ಮ ಸರ್ಕಾರವು ಈ ಸ್ಟೈಫೆಂಡರಿ ಗ್ರ್ಯಾಜುಯೇಟ್‌ಗಳನ್ನು ಖಾಯಂ ಮಾಡುವುದಕ್ಕೆ ಯಾವುದಾದರೂ ಒಂದು ಕಾನೂನನ್ನು ಪ್ರತ್ಯೇಕವಾಗಿ ಮಾಡಿ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ನಮ್ಮ ಸದನಕ್ಕೆ ಯಾವುದೇ ಕಾನೂನನ್ನು ಮಾಡುವುದಕ್ಕೆ ಅರ್ಹತೆ ಮತ್ತು ಅಧಿಕಾರ ಇದೆ ಯಾವುದೋ ಒಂದು ಕಾನೂನಿನ ತೊಡಕಿನಿಂದ ಈ ಸ್ಟೈಫೆಂಡರಿ ಗ್ರ್ಯಾಜುಯೇಟ್‌ಗಳನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎಂದು ನಮ್ಮ ಸರ್ಕಾರ ನೆಪ ಹೇಳಬಾರದೆಂದು ನಮ್ಮ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಒಂದು ಪ್ರಾಮುಖ್ಯವಾದ ವಿಚಾರವನ್ನು ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಈ ಸ್ಟೈಫೆಂಡರಿ ಗ್ರ್ಯಾಜುಯೇಟ್‌ಗಳನ್ನು ಸರ್ಕಾರ ಖಾಯಂ ಮಾಡುವುದರಿಂದ ರೋಸ್ಟರ್ ಪದ್ಧತಿಗೆ ಅನ್ಯಾಯ ಮಾಡಿದಂತಾಗುತ್ತದೆಂದು ಅವರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ ಇವರುಗಳನ್ನು ಖಾಯಂ ಮಾಡುವುದರಿಂದ ಲಕ್ಷಾಂತರ ಜನ ನಿರುದ್ಯೋಗಿ ಗ್ರ್ಯಾಜುಯೇಟ್ಸ್‌ಗಳಿಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಆದರೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ. ಈಗ ಹಾಲಿ ಇರುವ ೯ ಸಾವಿರ ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್‌ಗಳಲ್ಲಿ ಎಲ್ಲಾ ವರ್ಗಕ್ಕೂ ಸೇರಿದ ಅಭ್ಯರ್ಥಿಗಳು ಇದ್ದಾರೆ. ಆದ್ದರಿಂದ ಯಾವ ಕೋಮಿನವರಿಗೂ ಈ ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್‌ಗಳನ್ನು ಖಾಯಂ ಮಾಡುವುದರಿಂದ ತೊಂದರೆಯಾಗುವುದಿಲ್ಲ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಒಂದು ಸಲಹೆಯನ್ನು ಸರ್ಕಾರಕ್ಕೆ ಸಜೆಸ್ಟ್ ಮಾಡಿದರು ಯಾವ ರೀತಿ ೨ ಸಾವಿರ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಖಾಯಂ ಮಾಡಲಾಗುತ್ತದೆಯೆಂದು ಘೋಷಿಸಿದಿರೋ ಅದೇ ರೀತಿ ಇವರುಗಳನ್ನೂ ಖಾಯಂ ಮಾಡಿ ಎಂದು ಹೇಳಿದ್ದಾರೆ. ಲೋಕಲ್ ಕ್ಯಾಂಡಿಡೇಟ್‌ಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ತೀರ್ಪು ಸಹ ಇದೆ ಒಂದು ಪಕ್ಷ ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್‌ಗಳನ್ನು ಖಾಯಂ ಮಾಡುವುದಕ್ಕೆ ಕಾನೂನಿನ ತೊಂದರೆ ಇದ್ದರೆ, ಈ ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್‌ಗಳನ್ನು ಲೋಕಲ್ ಕ್ಯಾಂಡಿಡೇಟ್ಸ್‌ಗಳೆಂದು ಪರಿಗಣಿಸಿ ಆಮೇಲೆ ಖಾಯಂ ಮಾಡಿ. ಆಗ ಕಾನೂನಿನ ತೊಡಕು ಏನೂ ಇರುವುದಿಲ್ಲ ಈಗಾಗಲೇ ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್ ಗಳಿಗೆ ೪೦-೪೫-೪೮ ವರ್ಷಗಳವರೆಗೆ ವಯಸ್ಸಾಗಿದೆ. ಆದ್ದರಿಂದ ಇವರನ್ನು ಬ್ಯಾಚ್ ಬೈ ಬ್ಯಾಚ್, ಅಥವಾ ಲಾಟ್ ಬೈ ಲಾಟ್ ಇವರುಗಳನ್ನು ಖಾಯಂ ಮಾಡಲಾಗುತ್ತದೆಂದು ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟರೆ ಅವರುಗಳಿಗೆ ಮನಸು ಸಮಾಧಾನವಾಗುತ್ತದೆ. ಇವರುಗಳಿಗೆ ರೋಸ್ಟರ್ ಅಪ್ಲೈ ಆಗುವುದಿಲ್ಲವಾದ್ದರಿಂದ ಇವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎನ್ನುವ ವಾದವನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ ಹಾಗೂ ಅದು ಸರಿಯೂ ಅಲ್ಲವೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ಸ್ಟೈಫೆಂಡರಿ ಗ್ರ್ಯಾಜುಯೇಟ್ಸ್‌ಗಳನ್ನು ಖಾಯಂ ಮಾಡುವ ಬಗ್ಗೆ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಸಲಹೆ ಮಾಡಿದರು. ಸುಮ್ಮನೆ ಇದರ ಬಗ್ಗೆ ಡಿಲೇ ಮಾಡತಕ್ಕ ವಿಧಾನವನ್ನು ಹುಡುಕಬೇಕಾಗಿದ್ದರೆ ಮಾತ್ರ ಈ ರೀತಿ ಸಮಿತಿ ಮಾಡಬೇಕಾಗುತ್ತದೆ. ಯಾವುದೇ ಸಮಿತಿಯಾಗಲೀ ೬ ತಿಂಗಳ ಒಳಗಾಗಿ ವರದಿಯನ್ನು ಕೊಡುವುದಕ್ಕಾಗುವುದಿಲ್ಲ ವರದಿ ಕೊಟ್ಟರು ಎಂದು ಇಟ್ಟುಕೊಳ್ಳಿ, ಆ ವರದಿಯನ್ನು ನೋಡಬೇಕಾದರೆ ೬ ತಿಂಗಳು ಬೇಕಾಗುತ್ತದೆ, ಹೀಗೆ ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲದೇ ತುಂಬಾ ಡಿಲೇ ಆಗುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಮಂತ್ರಿಗಳು ಇದ್ದಾರೆ, ಒಳ್ಳೆಯ ತಜ್ಞರುಗಳು ಇದ್ದಾರೆ, ಲಾ ಡಿಪಾರ್ಟ್‌ಮೆಂಟ್ ಇದೆ, ಲಾ ಡಿಪಾರ್ಟ್‌ಮೆಂಟಿನಲ್ಲಿ ಒಳ್ಳೆಯ ಸೆಕ್ರೆಟರಿ ಇದ್ದಾರೆ, ಇವರುಗಳೆಲ್ಲಾ ಬುದ್ಧಿವಂತರು. ಇವರೆಲ್ಲಾ ಸೇರಿ ಕುಳಿತು ಮಾತನಾಡಿದರೆ ಒಂದೆರಡು ದಿನಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಬೊಮ್ಮಾಯಿಯವರಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಅವರು ಈ ವಿಷಯಕ್ಕೆ ಸಂಬಂಧಪಟ್ಟಹಾಗೆ ಯಾವ ತಜ್ಞರನ್ನು ಬೇಕಾದರೂ ಕೇಳಲಿ ಕಾನೂನು ತಜ್ಞರೊಡನೆ ವಿಚಾರ ವಿಮರ್ಶೆಮಾಡಿ ಒಂದು ನಿರ್ಧಾರಕ್ಕೆ ಬಂದು, ಯಾವ ರೀತಿಯಿಂದಲಾದರೂ ಈ ಒಂದು ಸಮಸ್ಯೆಯನ್ನು ಬಗೆಹರಿಸಿ ಒಂದು ಅಂತಿಮವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ, ಹಾಗೆ ತೀರ್ಮಾನಕ್ಕೆ ಬರುವಾಗ ಒಂದು

ಸೂಕ್ತ ರೀತಿಯ ಚಿಂತನೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕು. ಸಾಧ್ಯವಾದಲ್ಲಿ ಅವರನ್ನು ಲೋಕಲ್ ಕ್ಯಾಂಡಿಡೇಟ್ ಆಗಿ ಪರಿವರ್ತನೆಮಾಡಿ, ಸ್ವಲ್ಪ ಕಾಲ ಅವರಿಗೆ ೪೯೦ ರೂ.ಗಳನ್ನು ಕೊಡುತ್ತಾ ಇದ್ದೀರಿ. ಅಂದರೆ ಮೊದಲಿಗಿಂತಲೂ ಅವರಿಗೆ ಈ ಮೊತ್ತವನ್ನು ಹೆಚ್ಚು ಮಾಡಿದ್ದೀರಿ. ಆದರೆ ಈ ಸಂಬಳವನ್ನು ಹೆಚ್ಚು ಮಾಡಿದಲ್ಲಿ, ಕೊಟ್ಟಲ್ಲಿ ಅವರಿಗೆ ಒಂದು ರೀತಿಯಲ್ಲಿ ಪರಿಹಾರ ಆಗುತ್ತದೆಯೇ ವಿನಃ ಶಾಶ್ವತವಾದ ಅವರ ಒಂದು ಸಮಸ್ಯೆಯು ಬಗೆಹರಿದಂತಾಗುವುದಿಲ್ಲ. ಅವರ ಜೀವನಕ್ಕೆ ಒಂದು ಭದ್ರತೆಯು ದೊರೆತಂತಾಗುವುದಿಲ್ಲ, ಸಮಾಧಾನದಿಂದ ಅವರಿಗೆ ಜೀವನ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ. ಅವರ ಜೀವನ ಮಟ್ಟವು ಸಹ ತುಂಬಾ ಕಷ್ಟಕರವಾಗಿದೆ. ಕೆಲವರಿಗೆ ಜಮೀನು ಅಥವಾ ಇತರ ಉತ್ಪನ್ನ ಮೂಲಗಳು ಇಲ್ಲ ತುಂಬಾ ಬಡವರು ಇದ್ದಾರೆ. ಅಂತಹವರಲ್ಲಿ ಕೇವಲ ಒಂದೇ ಸಮಾಜದವರು ಇಲ್ಲ. ಎಲ್ಲಾ ಸಮಾಜದವರೂ ಇದ್ದಾರೆ. ಇಲ್ಲಿ ಯಾವ ಜಾತಿಯ ಪ್ರಶ್ನೆಯೂ ಇಲ್ಲ. ಎಸ್.ಸಿ., ಎಸ್ ಟಿ., ಬಿ.ಸಿ., ಬಿ.ಟಿ. ಬಿ.ಸಿ.ಎಂ. ಮುಂತಾಗಿ ಎಲ್ಲಾ ವರ್ಗದವರೂ ಇದ್ದಾರೆ. ಆದ ಕಾರಣ ಇಲ್ಲಿ ರೋಸ್ಟರ್ ಪದ್ಧತಿಗೆ ಏನು ಧಕ್ಕೆ ಉಂಟಾಗುತ್ತದೆ ಎಂದು ಕೆಲವಾರು ಮಾನ್ಯ ಸದಸ್ಯರು ವಾದಿಸಿದರು, ಅದಕ್ಕೆ ಹುರುಳಿಲ್ಲ ಎಂದು ಹೇಳಬೇಕಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಯವರು ಈ ಬಗ್ಗೆ ಚಿಂತನೆ ಮಾಡಿ, ಅವರಿಗೆ ಒಂದು ಶಾಶ್ವತವಾದ ಸಮಾಧಾನಕರವಾದ ರೀತಿಯಲ್ಲಿ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡು ನನಗೆ ಸಮಯಾವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಮಾತನಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸದನದಲ್ಲಿ ಮಾನ್ಯ ಸದಸ್ಯರ ನೇಕರು, ಸ್ಟೈಪೆಂಡರಿ ಪಧವೀಧರರ ಬಗ್ಗೆ ಸಾಕಷ್ಟು ಮಾತುಗಳನ್ನು ಆಡಿದ್ದಾರೆ. ನಮ್ಮ ಸರಕಾರವು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಮೇಲೆ, ಅನೇಕ ಒಳ್ಳೆಯ ಪ್ರಗತಿಪರವಾದ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ...

(ಗೊಂದಲ)

ಅಧ್ಯಕ್ಷರೇ ನಾನು ಮಾತನಾಡುವಾಗ ಕೆಲವು ಮಾನ್ಯ ಸದಸ್ಯರುಗಳು ಗೊಂದಲ ಮಾಡುತ್ತಿದ್ದಾರೆ. ದಯವಿಟ್ಟು ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು — ದಯವಿಟ್ಟು ಇತರರು ಕುಳಿತುಕೊಳ್ಳಬೇಕು. ಅವರು ಮಾತನಾಡುತ್ತಿದ್ದಾರೆ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ನಮ್ಮ ಸರಕಾರ ಎಷ್ಟೋ ಒಳ್ಳೆಯ ಕೆಲಸವನ್ನು ಮಾಡಿದೆ ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಸ್ವತಃ ಶ್ರೀಮತಿ ನೇಗಂರವರೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಶ್ರೀಮತಿ ಮುಂಕ್ತರುನ್ನೀಸಾ.— ನಮ್ಮ ಸರಕಾರ ಮಾಡಲಿಲ್ಲ., ನಿಮ್ಮ ಸರಕಾರವಾದರೂ ಒಳ್ಳೆಯ ಕೆಲಸಗಳನ್ನು ಮಾಡಲಿ, ಸಂತೋಷ. ಒಟ್ಟಿನಲ್ಲಿ ಒಳ್ಳೆಯ ಕೆಲಸಕಾರ್ಯಗಳು ಆಗಬೇಕು. ನೀವು ಹೇಳುತ್ತೀರಿ ನಮ್ಮ ಸರಕಾರ ಮಾಡಿಲ್ಲ ಎಂದು...

ಅಧ್ಯಕ್ಷರು.— ಶ್ರೀಮತಿ ಲೀಲಾದೇವಿ ಪ್ರಸಾದ್‌ರವರೇ ಎರಡು ನಿಮಿಷಗಳಲ್ಲಿ ಮುಗಿಸಿ ಬಿಡಿ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್.— ಸ್ಟೈಪೆಂಡರಿ ಪದವೀಧರರ ಬಗ್ಗೆ ಸರಕಾರಕ್ಕೆ ಅತೀವ ಕಾಳಜಿ ಇದೆ. ಅವರ ಬಗ್ಗೆ ಒಂದು ಸೂಕ್ತ ನಿಲುವನ್ನು ತಳೆದು ಅನುಕೂಲ ಮಾಡಿ ಕೊಡುತ್ತಾರೆ ಎಂಬ ವಿಶ್ವಾಸವೂ ನಮಗಿದೆ. ಯಾವುದೇ ಒಂದು ಪರಿಸ್ಥಿತಿಯಲ್ಲಿ ತಜ್ಞರೊಂದಿಗೆ ಚರ್ಚಿಸಿ ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಪರಿವರ್ತನೆ ಮಾಡಿದರೂ ನಮಗೆ ಸಂತೋಷ. ಅವರಿಗೆ ಈಗ ೪೯೦ ರೂಪಾಯಿಗಳ ಹೊರತಾಗಿ ಬೇರೆ ಯಾವ ಸೌಲಭ್ಯವೂ ಇಲ್ಲ. ಆದರಿಂದ ಅವರಿಗೆ ತಮ್ಮ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದೆ. ಅವರು ತುಂಬಾ ತೊಂದರೆಯನ್ನು ಎದುರಿಸುತ್ತಾ ಇದ್ದಾರೆ. ಇವೊತ್ತು ವಿಧಾನಸೌಧದ ಒಬ್ಬ ಪೀವನ್ ಕೂಡ ಒಂದು ಸಾವಿರಕ್ಕೂ ಹೆಚ್ಚು ಸಂಬಳವನ್ನು ಹಾಗೂ ಇತರ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇಂತಹ ಕಷ್ಟಕರವಾದ ಪರಿಸ್ಥಿತಿಯಲ್ಲಿ ಈ ಸ್ಟೈಪೆಂಡರಿಗಳು ಇನ್ನು ಎಷ್ಟು ಕಾಲ ಮುಂದಕ್ಕೆ ಹೋಗಬಹುದು ಎಂದು ವಿಚಾರ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಸಂಬಂಧಪಟ್ಟವರೊಂದಿಗೆ ಮಾತನಾಡಿದ್ದಾರೆ. ಆ ಕುರಿತು ಸೂಕ್ತ

ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದಾರೆ. ತಮ್ಮ ಕಳಕಳಿಯನ್ನು ಕೂಡ ಅವರು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಒಂದು ಸೂಕ್ತ ಭರವಸೆಯನ್ನು ಈ ಕುರಿತು ಅವರಿಗೆ ಕೊಡಬೇಕೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು.— ಬಂಗಾರಪ್ಪನವರೇ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಇನ್ನು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಕಾರಣ ಈಗಾಗಲೇ ಎರಡೂ ಕಡೆಯ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವಿವರವಾಗಿ ವ್ಯಕ್ತಪಡಿಸಿದ್ದಾರೆ. ಮತ್ತು ಹೇಳತಕ್ಕಂತಹ ಎಲ್ಲಾ ವಿಚಾರಗಳನ್ನು ಕೂಡ ಹೇಳಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಇಂತಹ ಸಮಸ್ಯೆಗಳು ಬಂದಾಗ ಸರಕಾರಕ್ಕೆ ಹಲವಾರು ಇತರ ಸಮಸ್ಯೆಗಳು ಎದುರಾಗುತ್ತವೆ. ಅದು ಸಹಜ. ಅದರಲ್ಲಿಯೂ ಆರ್ಥಿಕ ಹೊರೆ-ಭಾರಗಳನ್ನು ಯಾವುದೇ ಸರಕಾರದವರು ಗಮನಿಸುತ್ತಾರೆ. ಅಂತೆಯೇ ಮಾನವೀಯತೆಯ ಪ್ರಶ್ನೆಯೂ ಬರುತ್ತದೆ. ಆದರೆ ತಮ್ಮ ಹೇಳಿಕೆಯನ್ನು ನೋಡಿದಾಗ ತಾವು ಎಲ್ಲಿಯೂ ಕೂಡ ಹಣಕಾಸಿನ ತೊಂದರೆಯಿಂದಾಗಿ ಈ ಕುರಿತು ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತಿಲ್ಲ ಎಂದು ಹೇಳಿಲ್ಲ. ಆ ವಿಚಾರವನ್ನೂ ಇಟ್ಟಿಲ್ಲ, ಎಂದು ಕಾಣುತ್ತದೆ. ನೀವು ಹೇಳಿರತಕ್ಕಂಥಾದ್ದು ಒಟ್ಟು ೫೪೦ ಲಕ್ಷ ರೂಪಾಯಿಗಳನ್ನು ಇವರಿಗಾಗಿ ಹೆಚ್ಚುವರಿ ಖರ್ಚಾಗುತ್ತಿದೆ ಎಂದು.

೨-೩೦ ಪಿ.ಎಂ.

ಇವರನ್ನು ಖಾಯಂ ಮಾಡಿದರೆ ನಮ್ಮ ಹಣಕಾಸಿನ ಪರಿಸ್ಥಿತಿಗೆ ತೊಂದರೆ ಬರುತ್ತದೆ ಎನ್ನುವ ಮಾತನ್ನು ತಾವು ಹೇಳಲಿಲ್ಲ. ಇದರ ಅರ್ಥ ಖಾಯಂ ಮಾಡುವುದಕ್ಕೆ ಸಕಾರಣಗಳು ಸಿಕ್ಕಿದರೆ ನೀವು ಅವರನ್ನು ಖಾಯಂ ಮಾಡುವುದಕ್ಕೆ ಸಿದ್ಧರಾಗಿದ್ದೀರಿ ಎಂದು ನಾನು ಭಾವಿಸುತ್ತೇನೆ. ಆರ್ಥಿಕವಾಗಿ ಯಾವ ತೊಂದರೆಗಳೂ ಇವೆ ಎನ್ನುವುದು ತಮ್ಮ ಹೇಳಿಕೆಯ ಪ್ರಸ್ತಾಪದಲ್ಲಿ ಇಲ್ಲ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಇದು ಮಾನವೀಯತೆಯಿಂದ ನೋಡುವ ಪ್ರಶ್ನೆ ಇದೆ. ಈ ಮಾತನ್ನಾಡಬೇಕಾದರೆ ಈವೊತ್ತು ಸ್ಟೈಫಂಡರಿ ಪದವೀಧರರ ಪ್ರಶ್ನೆ ನಮ್ಮ ಮುಂದೆ ಚರ್ಚೆಗೆ ಬಂದಿದೆ. ಅವರಿಗೋಸ್ಕರ ನಾವು ಮಾತನಾಡುತ್ತಿದ್ದೇವೆ. ಅದೇ ರೀತಿಯಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ಜನರು ಏನು ಇದ್ದಾರೆ ಅವರ ಬಗ್ಗೆಯೂ ಸಹ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈವೊತ್ತು ನಮಗೆಲ್ಲಾ ಗೊತ್ತಿರುವ ಹಾಗೆ ಇದರ ಬಗ್ಗೆ ಸುಪ್ರೀಂಕೋರ್ಟ್ ತೀರ್ಮಾನವಾದ ಮೇಲೆ ಆಡಳಿತದಲ್ಲಿ ಕೆಲಸ ಮಾಡತಕ್ಕಂಥಾವರಿಗೆ ಧೈರ್ಯ ಬಂದಿದೆ. ಯಾರ್ಯಾರು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೆ ಅವರನ್ನು ಸರ್ಕಾರ ಕೆಲಸದಿಂದ ತೆಗೆದುಹಾಕತಕ್ಕಂಥಾದ್ದು ಸರಿಯಲ್ಲ, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಕೈಬಿಡಬಾರದು ಎನ್ನುವ ಪ್ರಶ್ನೆ ಅದರಲ್ಲಿ ಬಂದಿದೆ. ಮಾನ್ಯ ಸಭಾಧ್ಯಕ್ಷರೇ, ಈ ತೀರ್ಪಿನಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಲ್ಲಿರತಕ್ಕಂಥ ಪ್ರಶ್ನೆ ಅದಲ್ಲ. ಇದು ಪ್ರತ್ಯೇಕವಾದ ಪ್ರಶ್ನೆ. ನೀವೇ ಇದನ್ನು ಪ್ರತ್ಯೇಕವಾಗಿ ಅಂದರೆ ಸರ್ಕಾರ ತೀರ್ಮಾನ ಮಾಡಬೇಕಾಗಿದೆ. ನಿಜ ಇದು ತಮ್ಮ ಕಾಲದಲ್ಲಿ ಉದ್ಭವವಾಗಲಿಲ್ಲ. ಹಿಂದೆ ಗುಂಡೂರಾಯರ ಸರ್ಕಾರ ಇದ್ದಾಗಲೂ ಈ ಸ್ಟೈಫಂಡರಿ ಪದವೀಧರರಿಗೆ ಒಂದು ಆಶ್ವಾಸನೆಯನ್ನು ಕೊಡುತ್ತಾ ಬಂದಿದ್ದಾರೆ. ಅದಕ್ಕೆ ನೀವೂ ಕೂಡ ಒಪ್ಪಿದ್ದೀರಿ. ತಾವು ನಿಮ್ಮ ಪಕ್ಷದ ೧೯೭೮ರ ಚುನಾವಣಾ ಪ್ರಣಾಳಿಕೆಯನ್ನು ತೆಗೆದು ನೋಡಿ. ಮತ್ತು ೧೯೮೩ರ ಪ್ರಣಾಳಿಯನ್ನೂ ನೋಡಿ ಆ ಪ್ರಣಾಳಿಕೆಯಲ್ಲಿ ಅವರ ಬಗ್ಗೆ ಸ್ಪಷ್ಟವಾಗಿ ಬರೆದಿದ್ದೀರಿ, ನಾವು ಅಂದರೆ ನೀವು ಜನತಾ ಪಕ್ಷದವರು, ನಮಗೆ ಅಧಿಕಾರ ಬಂದರೆ ನಾವು ಸರ್ಕಾರವನ್ನು ಬಹುಮತದಿಂದ ರಚನೆ ಮಾಡಿದಾಗ, ಆಡಳಿತ ನಮ್ಮ ಕೈಗೆ ಬಂದರೆ ಕರ್ನಾಟಕದಲ್ಲಿ ಕೆಲಸ ಮಾಡತಕ್ಕಂಥ ಸ್ಟೈಫಂಡರಿ ಪದವೀಧರರು ಯಾವ್ಯಾವ ಇಲಾಖೆಯಲ್ಲಿ ಇದ್ದಾರೋ ಅವರನ್ನು ಖಾಯಂ ಮಾಡುತ್ತೇವೆಂದು ತಮ್ಮ ಚುನಾವಣಾ ಕಾಲದಲ್ಲಿ ಹೇಳಿದ್ದೀರಿ. ಎರಡು ಸಾರಿ ಈ ರೀತಿ ಕೊಟ್ಟಿದ್ದೀರಿ. ಈ ಮಾತನ್ನು ಮರೆಯುವುದಕ್ಕಾಗುವುದಿಲ್ಲ. ಸುಮಾರು ಈ ಒಂದು ಮಾತನ್ನು ಹೇಳಬೇಕಾದರೆ, ತಾವು ಈ ಮಾತನ್ನು ನಡೆಸುತ್ತೀರಿ ಅನ್ನುವ ನಂಬಿಕೆಯಿಂದ ನಾನು ಹೇಳುತ್ತಿದ್ದೇನೆ. ಈ ಸ್ಟೈಫಂಡರಿ ಗ್ರಾಜುಯೇಟ್ಸ್ ಅವರ ತಂದೆತಾಯಿಗಳು ಮತ್ತು ಅವರ ಮನೆತನದವರೂ ಎಲ್ಲರೂ ಸೇರಿ ತಮಗೆ ಮತ ಚಲಾವಣೆ ಮಾಡಿದ್ದಾರೆ ಎನ್ನುತಕ್ಕಂಥ ಮಾತನ್ನು ತಾವು ಮರೆಯಬಾರದು. ಈ ಸಂದರ್ಭದಲ್ಲಿ ತಾವು ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾರ್ಯಾರು ಈ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ ಅವರೆಲ್ಲರೂ ನಿರೀಕ್ಷೆ ಇಲ್ಲದೆ ತಮಗೆ ಬೆಂಬಲ ಕೊಟ್ಟಿದ್ದಾರೆ. ಈ ಬಗ್ಗೆ ೧೯೮೩ ನೇ ಇಸವಿ

ಹೋಯಿತು, ೧೯೮೪ ನೇ ಇಸವಿ ಹೋಯಿತು, ೧೯೮೫ ನೇ ಇಸವಿಯೂ ಹೋಯಿತು, ೧೯೮೬ ನೇ ಇಸವಿಯೂ ಕೂಡ ಹೋಗುತ್ತಾ ಇದೆ. ಈಗಾಗಲೇ ೪ ವರ್ಷಗಳು ಕಳೆಯುತ್ತಾ ಇವೆ. ಕರ್ನಾಟಕದ ಜನತೆ ತಮಗೆ ಮತವನ್ನು ಕೊಟ್ಟಮೇಲೆ, ಅವರ ತಂದೆತಾಯಿಗಳು ಮತ್ತು ಅವರ ಮನೆತನದವರೆಲ್ಲಾ ತಮಗೆ ಮತ ಕೊಟ್ಟಮೇಲೆ ಅವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ತಮ್ಮ ಪ್ರಣಾಳಿಕೆಯ ಮುಖಾಂತರ ಮತ್ತು ಪಕ್ಷದ ಮುಖಾಂತರ ಇದನ್ನು ಇಟ್ಟಾಗ ಅದರ ಬಗ್ಗೆ ತಾವು ಗಮನ ಕೊಡಬೇಕಾಗಿದೆ. ನೀವು ನಮ್ಮ ಪಕ್ಷ ಬಹುಮತದಿಂದ ಬಂದರೆ, ತಾವು ಅಧಿಕಾರಕ್ಕೆ ಬಂದರೆ ನಾವು ಇದನ್ನು ಬಗೆಹರಿಸುತ್ತೇವೆ, ಅವರನ್ನು ಖಾಯಂ ಮಾಡುತ್ತೇವೆ ಈ ದಿಶೆಯಲ್ಲಿ ಸ್ಪಷ್ಟವಾದ ಹೆಜ್ಜೆಯನ್ನಿಡುತ್ತೇವೆ ಅಂತ ಹೇಳಿದ್ದೀರಿ. ಸ್ಟೈಫಂಡರಿ ಪದವೀಧರರು ಅಲ್ಲದೇ ಇರುವವರೂ ಕೂಡ ತಮಗೆ ಮತ ಕೊಟ್ಟಿದ್ದಾರೆ ಎನ್ನುವ ಅಂಶವನ್ನು ಸಹ ತಾವು ಮರೆಯಬಾರದು. ಆದುದರಿಂದ ತಾವು ಹೇಳಿರುವ ಈ ವಿಷಯವನ್ನು ಕಡೆಗಣಿಸದೆ ಅದರ ಬಗ್ಗೆ ಚಾಚೂತಪ್ಪದೆ ಅವರ ಬಗ್ಗೆ ಗಮನದಲ್ಲಿಟ್ಟುಕೊಂಡು ತಕ್ಷಣ ಅವರನ್ನು ಖಾಯಂ ಮಾಡುವ ಕಾರ್ಯಕ್ರಮಗಳನ್ನು ಹಾಕಿ ತಮ್ಮ ಮಾತನ್ನು ಉಳಿಸಿಕೊಳ್ಳಬೇಕು. ೧೯೮೩–೮೪, ೧೯೮೪–೮೫, ೧೯೮೫–೮೬ ಕಳೆದುಹೋಯಿತು. ೧೯೮೬ ರ ಬಜೆಟ್ ಅಧಿವೇಶನದಲ್ಲಿ ಇವರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿತ್ತು, ಹೇಳಲಿಲ್ಲ. ಆ ಸಂದರ್ಭದಲ್ಲಿ ನಾನು ಪ್ರಸ್ತಾವ ಮಾಡಿದ್ದೆ. ಆವಾಗ ಅವರು ಹೇಳಿದರು ಇವರ ಬಗ್ಗೆ ನಮಗೆ ಸಹಾನುಭೂತಿ ಇದೆ, ಎಂದು ಸರ್ಕಾರದ ಪರವಾಗಿ ಒಂದು ಹೇಳಿಕೆ ಕೊಟ್ಟಿದ್ದಾರೆ. ನಮಗೆ ಸಹಾನುಭೂತಿ ಇದೆ, ಅವರ ಬಗ್ಗೆ ವಿರೋಧ ಇಲ್ಲ. ಆಗಲೂ ಸಹ ಈ ವಿಷಯದ ಬಗ್ಗೆ ಎಲ್ಲಾ ಪಕ್ಷದವರೂ ಮಾತನಾಡಿದರು, ನಮ್ಮ ಪಕ್ಷದವರು, ನಿಮ್ಮ ಪಕ್ಷದವರು ಎಲ್ಲರೂ ಹೇಳಿದ್ದಾರೆ. ಈ ವಿಚಾರದಲ್ಲಿ ಎಲ್ಲರೂ ಸಹ ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ ನಾನು ಈವೊತ್ತು ಸರ್ಕಾರವನ್ನು ಕೇಳುತ್ತೇನೆ, ಈಕಡೆ ಕೂತವರು ಆಕಡೆ ಕೂತರುವೆಲ್ಲರೂ ಕೇಳಿದರು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿರುವ ಮಾತು ಮತ್ತು ಈ ಸದನದಲ್ಲಿ ತಾವು ಕೊಟ್ಟಿರತಕ್ಕಂಥಾ ಮಾತಿಗನುಸಾರವಾಗಿ ಇದರ ಬಗ್ಗೆ ತಾವು ತಕ್ಷಣವೇ ತೀರ್ಮಾನ ಮಾಡಿ ಇವರನ್ನೆಲ್ಲಾ ಸಂಪೂರ್ಣವಾಗಿ ಖಾಯಂ ಮಾಡಬೇಕು, ಈ ಒಂದು ಹಿನ್ನೆಲೆಯಲ್ಲಿ ತೀರ್ಮಾನ ಮಾಡುತ್ತೇವೆ ಎನ್ನುವ ಹೇಳಿಕೆ ಕೊಡಿ. ಇದೇ ವರ್ಷದಲ್ಲೇ ಅವರನ್ನು ಖಾಯಂ ಮಾಡುವ ಹಾಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾದರೆ ತಾವೇ ಹಾಕಿಕೊಳ್ಳಬೇಕು. ಈ ಸದನದ ಒಂದು ಸಮಿತಿಯನ್ನು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ದಯವಿಟ್ಟು ಕ್ಷಮಿಸಬೇಕು. ಈ ಸದನದ ಒಂದು ಸಮಿತಿಯನ್ನು ಮಾಡಬೇಕೆಂದು ನಮ್ಮ ಪಕ್ಷದವರು ತೀರ್ಮಾನ ಮಾಡಿರಲಿಲ್ಲ. ಕೆಲವರು ಆ ರೀತಿಯಾಗಿ ಸಲಹೆ ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಈ ರೀತಿಯಾಗಿ ಅನೇಕ ಸಮಿತಿಗಳು ಆಗಿರುವುದು ಮತ್ತು ಅವರು ವರದಿಯನ್ನು ಕೊಡುತ್ತಾ ಬಂದಿರುವುದು ಮತ್ತು ಆ ವರದಿಗಳು ಸರ್ಕಾರದಲ್ಲಿ ಕೊಳೆಯುತ್ತಾ ಇರುವುದು ತಮಗೆ ಗೊತ್ತಿದೆ, ಆ ಸಮಿತಿಯವರು ವರದಿ ಕೊಡುವುದಕ್ಕೆ ೧–೨ ತಿಂಗಳು ನಿಧಾನ ಮಾಡುವುದೂ ಇದ್ದೀವೆ. ಮತ್ತು ಆ ರಿಪೋರ್ಟ್ ಬಂದಮೇಲೂ ಯಾವ ತೀರ್ಮಾನವನ್ನೂ ತೆಗೆದುಕೊಳ್ಳುವುದಿಲ್ಲ. ಹೀಗಾಗಿ ಅನೇಕ ವರ್ಷಗಳು ಉರುಳುತ್ತಾ ಬರುತ್ತಿವೆ. ಆದರೆ ಇದರ ಬಗ್ಗೆ ಸಮಿತಿ ಮಾಡುವುದು ಇದು ಪ್ರತ್ಯೇಕ. ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಆದುದರಿಂದ ನಾನು ಈಗ ಸಭಾಧ್ಯಕ್ಷರ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಅದು ಬೇಡ. ಈ ವಿಷಯದ ಬಗ್ಗೆ ತಕ್ಷಣ ತೀರ್ಮಾನ ಮಾಡಬೇಕು ತಡವಾಗಕೂಡದು. ಇದಕ್ಕಾಗಿ ಈವೊತ್ತಿನ ದಿವಸ ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಿಂದಲೂ ಯುವಕ ಯುವತಿಯರು ಬಂದಿದ್ದಾರೆ. ಈಗ ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಿಂದಲೂ ಅವರುಗಳು ಇಲ್ಲಿಗೆ ಬಂದು ಬಹಳ ಶಾಂತಿಯುತವಾಗಿ, ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. ಅದು ಅವರಿಗೆ ಇರತಕ್ಕಂಥಾ ರಾಜ್ಯಾಂಗದ ಹಕ್ಕು. ಇದರ ಬಗ್ಗೆ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಅದೇನೆಂದರೆ, ಇವತ್ತು ಸ್ಟೈಫಂಡರಿ ಪದವೀಧರರುಗಳ ಹಂದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ ಅವರೇನು ಮುಷ್ಕರ, ಧರಣಿ, ಪ್ರತಿಭಟನೆ ಇತ್ಯಾದಿಗಳನ್ನು ನಡೆಸುತ್ತಿದ್ದರೆ ಅದು ನ್ಯಾಯ ಸಮ್ಮತ ಆದರೆ ತಾವು ಈ ರೀತಿಯಾದ ಕ್ರಮಗಳನ್ನು ಅನುಸರಿಸದಂತೆ ಅವರಿಗೆ ಎಚ್ಚರಿಕೆಯನ್ನು ನೀಡುವ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದೀರಿ. ನೀವು ಅವರಿಗೆ ಎಚ್ಚರಿಕೆಯನ್ನು ಕೊಟ್ಟು ನಿಮಗೆ ಸಂಬಳ ಜಾಸ್ತಿ ಮಾಡುವುದಿಲ್ಲ, ಎಂದು ಸ್ಪಷ್ಟವಾಗಿ ಹೇಳಬೇಕು, ಆದರೆ ಶ್ರೀಮಾನ್ ಎಸ್. ಆರ್. ಬೊಮ್ಮಾಯಿರವರು ಹಾಗೆ ಹೇಳುವುದಿಲ್ಲ. ಆದರೆ ಬರೀ ಎಚ್ಚರಿಕೆಯನ್ನು

ಮಾತ್ರ ಕೊಡುತ್ತಾರೆ. ಆದರೆ They are not public servants. ಆದರೆ ಕಾನೂನು ಪ್ರಕಾರ ಸರ್ಕಾರೀ ಕೆಲಸದಲ್ಲಿದ್ದು ಖಾಯಂ ಆದವರಿಗೆ ಮಾತ್ರ ನಿಮ್ಮ ಸಿವಿಲ್ ಸರ್ವಿಸ್ ರೂಲ್ಸ್ ಅಪ್ಲೈ ಆಗ ತಕ್ಕಂಥ ವಿಚಾರವಿದೆ. ಆಗ ಅವರಿಗೆ ಇದು ಅಪ್ಲೈ ಆಗುತ್ತದೆ. ಆದುದರಿಂದ ಇವರನ್ನೂ ಕೂಡ ಮಾನವೀಯತೆ ದೃಷ್ಟಿಯಿಂದ ನೋಡಿ ಎಂದು ಹೇಳ ಬಯಸುತ್ತೇನೆ.

ಇನ್ನು ಮತ್ತೊಂದು ವಿಚಾರ ಈಗ ಏನಾಗಿದೆ ಎಂದರೆ ಅನೇಕ ಇಲಾಖೆಗಳಲ್ಲಿ ಕೆಲಸಮಾಡುತ್ತಿರುವ ಖಾಯಂ ನೌಕರರು ಯಾರು ಇದ್ದಾರೆ ಅವರು ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ ಏನು ಕೆಲಸ ಮಾಡುತ್ತಿದ್ದಾರೆ ಅದೇ ರೀತಿಯಾಗಿ ಈ ಯುವಕರೂ ಯುವತಿಯರೂ ಕೂಡ ಕೆಲಸ ಮಾಡು ವುದನ್ನು ನಾವು ಕಂಡಿದ್ದೇವೆ. ಸ್ಟೈಫೆಂಡರಿ ಪದವೀಧರರು ಏನು ಇದ್ದಾರೆ ಅವರಲ್ಲಿ ಕೆಲವರಿಗೆ ವಯಸ್ಸಾಗಿದೆ ಎನ್ನುವ ವಿಚಾರವೂ ಕೂಡ ನಮ್ಮ ಗಮನಕ್ಕೆ ಬಂದಿದೆ ಅದು ಮೊನ್ನೆ ತಾನೇ ಗೊತ್ತಾ ಯಿತು. ಸುಮಾರು ಸ್ಟೈಫೆಂಡರಿ ಪದವೀಧರರ ವಯಸ್ಸು ೪೨ ರಿಂದ ೪೫ರ ತನಕ ಆಗಿದೆ. ಅವರಿಗೆ ವಯೋಮಿತಿಯನ್ನು ಜಾಸ್ತಿ ಮಾಡಿದ ಹಾಗೆ ಅದಕ್ಕನುಗುಣವಾಗಿ ಇದನ್ನು ಕೂಡ ಜಾಸ್ತಿ ಮಾಡ ಬೇಕಾಗುತ್ತದೆ. ಒಂದು ವೇಳೆ ಅವರನ್ನೆಲ್ಲಾ ಖಾಯಂ ಮಾಡಿದರೂ ಸಹ ಅವರಿಗೆ ನೌಕರಿ ಕೇವಲ ೪–೫ ವರ್ಷಗಳು ಉಳಿಯಬಹುದು. ಇದರಿಂದ ಅವರು ರಿಟೈರ್ಡ್ ಆದಮೇಲೆ ಹೆಚ್ಚು ಪೆನ್‌ಷನ್ ಆಗಲಿ, ಇನ್ನು ಇತರ ರಿಟೈರ್‌ಮೆಂಟ್ ಬೆನಿಫಿಟ್ ಆಗಲಿ ಅಂಥ ದೊಡ್ಡದಾಗಿ ಸಿಗಲಾರದು ಎನ್ನುವುದು ನನ ಅಭಿಪ್ರಾಯ.

ಇನ್ನೊಂದು ಮಾತು ಏನೆಂದರೆ ಇಬ್ಬರು ಸ್ಟೈಫೆಂಡರಿ ಪದವೀಧರರು ಮದುವೆಯಾದರೆ ಅವರಿ ಬ್ಬರದೂ ವರಮಾನ ಜಾಸ್ತಿಯಾಗುತ್ತದೆಂದು ನೋಡಿ ಅಂಥವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಇದನ್ನು ನೋಡಿದರೆ ಆ ಸ್ಟೈಫೆಂಡರಿ ಪದವೀಧರರು ಮದುವೆಯಾಗಬಾರದಿತ್ತು, ಹಾಗೆಯೇ ಉಳಿಯ ಬೇಕಾಗಿತ್ತು ಎಂದು ಕಾಣುತ್ತದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಬಿ. ಬಸವಲಿಂಗಪ್ಪನವರು ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆ ಯವರು ರಿಸರ್ವೇಷನ್ ಬಗ್ಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸುವುದಕ್ಕೆ ತಾವು ಗಮನಹರಿಸಬೇಕು ಎಂದು ಹೇಳಿದರು. ಅವರನ್ನು ಖಾಯಂ ಮಾಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ಯಾರದ್ದೂ ವಿರೋಧ ಇಲ್ಲ. ಇದನ್ನು ಮಾಡಬೇಕಾದ ಸಂದರ್ಭದಲ್ಲಿ ಅವರಿಗೆ ಕೊಡತಕ್ಕಂಥಾ ಕೋಟದ ವಿಚಾರ ವನ್ನು ಗಮನದಲ್ಲಿಟ್ಟುಕೊಂಡು ಮಾಡಿ. ಅವರನ್ನು ಕೈಬಿಡಬಾರದು, ಅವರನ್ನು ಕೆಲಸಕ್ಕೆ ತೆಗೆದು ಕೊಳ್ಳಿ, ಇದನ್ನು ಗಮನದಲ್ಲಿಟ್ಟುಕೊಂಡು ತಾವು ಕೆಲಸ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಮೊಯ್ಲಿಯವರೂ ಒಂದು ಮಾತನ್ನು ಹೇಳಿದರು. ನನ್ನ ಪ್ರಕಾರ ಸರ್ಕಾರದ ಇಲಾಖೆಗಳು ೮೦ ಇರಬಹುದು, ೧೦೦ ಹತ್ತಿರ ಇರಬಹುದು. ನನಗೆ ಗೊತ್ತಿರುವ ಹಾಗೆ ೧೯೮೩ ರಲ್ಲಿ ನೀವು ಅಧಿಕಾರಕ್ಕೆ ಬಂದಾಗ್ಗೆ ೫೨ ಸಾವಿರ ಹುದ್ದೆಗಳು ಖಾಲಿ ಇದ್ದವು. ಇವತ್ತು ನನಗೆ ಗೊತ್ತಿರುವ ಹಾಗೆ ಸರ್ಕಾರದ ಎಲ್ಲಾ ಇಲಾಖೆಗಳಿಂದ ಒಟ್ಟು ೭೧ ಸಾವಿರ ಚಿಲ್ಲರೆ ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದೇನೆ. ಅಷ್ಟು ವೇಕೆನ್ಸೀಸ್ ಫಿಲಪ್ ಮಾಡಿ ಕೆಲಸ ಮಾಡದೇ ಹೋದರೆ ಸಾರ್ವಜನಿಕರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕು ಆಫೀಸಿನಲ್ಲಿ, ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಪಿ. ಡಬ್ಲ್ಯು. ಡಿ. ಯಲ್ಲಿ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಇಂತಹ ಪರಿಸ್ಥಿತಿ ಬರುತ್ತದೆ. ಇಲಾಖೆಗಳಲ್ಲಿ ಖಾಲಿ ಹುದ್ದೆಗಳು ಇವೆ. ಅವರನ್ನು ಖಾಯಂ ಮಾಡುವ ವಿಚಾರದಲ್ಲಿ ತಾವು ಗಮನ ಕೊಡಬೇಕು. ಆಂಧ್ರ ಸರ್ಕಾರದ್ದು ಅವರು ಹೇಳಿದ್ದಾರೆ, ಅಲ್ಲೂ ಕೂಡ ಖಾಯಂ ಮಾಡಿದ್ದಾರೆ ಎಂದು ಹೇಳಿದ್ದಾರೆ ತಾವೂ ಕೂಡ ಖಾಯಂ ಮಾಡುವ ವಿಚಾರದಲ್ಲಿ ಗಮನಹರಿಸಬೇಕು ಎಂದು ಹೇಳಿ. ಇನ್ನು ಉಳಿದಿರತಕ್ಕ ವಿಷಯಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನವೀಯ ದೃಷ್ಟಿಯಿಂದ ಮಾಡಿ, ಒಳ್ಳೆಯ ಹೆಸರನ್ನು ತೆಗೆದುಕೊಳ್ಳಿ. ಇದು ಬಹಳ ಸೀರಿಯಸ್ಸಾದ ವಿಚಾರ. ಮಾತು ಕೊಟ್ಟ ಮೇಲೆ ಆ ಮಾತನ್ನು ಉಳಿಸಿಕೊಳ್ಳಬೇಕಾಗುತ್ತದೆ. ಕ್ಷಮಿಸಬೇಕು. ಈ ಬಗ್ಗೆ ರೂಲ್ಸ್‌ನಲ್ಲಿ ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವಿಲ್ಲ, ಆದರೂ ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ.

ಅಧ್ಯಕ್ಷರು.— ಸ್ಪೆಷಲ್ ಕೇಸ್ ಎಂದು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಕಡೆ ಮಾತ್ರ ಈ ಕಡೆಯವರಿಗೂ ಅವಕಾಶ ಕೊಟ್ಟಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರು ಈ ಕಡೆ ಕುಳಿತಿದ್ದರೆ ಅವರನ್ನು ಖಾಯಂ ಮಾಡಬೇಕು ಎಂದು ಸಲಹೆ ಕೊಡುತ್ತಿದ್ದರು ಇವರ ಬಗ್ಗೆ ತಮಗೂ ತುಂಬ ಕಳಕಳಿ ಇದೆ. ಖಾಯಂ ಮಾಡಬೇಕು ಎಂದು ಅವರೇ ಸಲಹೆ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ನಮ್ಮೆಲ್ಲರ ಪರವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಸರ್ಕಾರ ಇದರ ಬಗ್ಗೆ ಒಳ್ಳೆಯ ಹೇಳಿಕೆಯನ್ನು ಕೊಟ್ಟು, ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳದೆ ಮಾಡಬೇಕು. ಮತ್ತೊಂದು ಸಲಹೆ ಮಾನ್ಯ ಯಡಿಯೂರಪ್ಪನವರು ಹೇಳಿದರು ತಾವು ಸದಸ್ಯರಿದ್ದಾಗ ಹೇಳಿದ್ದೀರಿ, ಈಗ ಹೇಳಿದರೆ ತಪ್ಪೇನೂ ಆಗುವುದಿಲ್ಲ. ತಾವು ಕೆಲವೊಂದು ಹೇಳಿದಿರಿ. ಮಾನ್ಯ ಕೃಷ್ಣಪ್ಪನವರು ಉತ್ತರ ಕೊಡಬೇಕಾದರೆ ರೂರಲ್ ಏರಿಯಾ ಬಗ್ಗೆ ಹೇಳಿದಿರಿ, ನನ್ನ ತಾಲ್ಲೂಕೂ ಹಾಗೇ ಇದೆ. ಆದ್ದರಿಂದ ತಾವು ಹೇಳಬಹುದು. ತಮ್ಮ ಸಲಹೆ ಕೂಡ ಒಳ್ಳೆಯದು ಇಲ್ಲಿ.

ಅಧ್ಯಕ್ಷರು.— ಎಲ್ಲರ ಅಭಿಪ್ರಾಯ ನನ್ನ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.— ಬಹಳ ಒಳ್ಳೆಯದು. ಈಗ ಮಾನ್ಯ ಬೊಮ್ಮಾಯಿಯವರು ಒಳ್ಳೆಯ ಹೇಳಿಕೆಯನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು ೯೦೦೦ ಸ್ಟೈಪೆಂಡರಿಗಳಿಗೆ ಹುದ್ದೆಗಳನ್ನು ಕೊಡುವುದರ ಬಗ್ಗೆ ಸಾಕಷ್ಟು ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಮಾನ್ಯ ಯೋಜನಾ ಸಚಿವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಈ ಸ್ಟೈಫಂಡರಿಗಳಿಗೆ ನಾವು ಈಗ ಕೊಡುತ್ತಾ ಇರತಕ್ಕಂಥ ಸಂಬಳದಲ್ಲಿ ಅವರ ಕಡೆಯಿಂದ ಹೆಚ್ಚಿಗೆ ಕೆಲಸವನ್ನು ನಿರೀಕ್ಷಣೆ ಮಾಡುವುದು ತಪ್ಪಾಗುತ್ತದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾದ ಮೇಲೆ ಅವರ ಸಂಬಳವನ್ನು ಹೆಚ್ಚು ಮಾಡಿರತಕ್ಕಂಥಾದ್ದು ನಿಜ. ಆದರೆ ಆರು ತಿಂಗಳಿಗೊಮ್ಮೆ ಈ ಸ್ಟೈಫಂಡರಿಗಳು ಎಲ್ಲಾ ಪಾರ್ಟಿಯವರನ್ನು ಕಾಡಿ, ಬೇಡಿ ನಮ್ಮ ಕೆಲಸ ಖಾಯಂ ಮಾಡಬೇಕು ಎಂದು ಕೇಳುತ್ತಾ ಇದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಅವರಿಗೆ ಕೊಟ್ಟಿರುವ ಸಂಬಳದಲ್ಲಿ ಅವರಿಂದ ಹೆಚ್ಚಿಗೆ ಕೆಲಸವನ್ನು ಅಪೇಕ್ಷೆ ಮಾಡುವುದು ತಪ್ಪಾಗುತ್ತದೆ. ಮತ್ತು ಅವರೂ ಸಹಿತ ತಹಶೀಲ್ದಾರ್ ಆಫೀಸಿನಲ್ಲಿ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಏನು ಕೆಲಸ ಮಾಡಬೇಕು ಎಂದು ಇಟ್ಟಿಪಟ್ಟಿದ್ದಾರೆ ಅದರ ಪ್ರಕಾರ ಆಗುತ್ತಾ ಇಲ್ಲ. ನಾನು ಎಲ್ಲಾ ಸ್ಟೈಫಂಡರಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲಾ ಎಂದು ಹೇಳುವುದಿಲ್ಲ. ಆದರೆ ಕೆಲವರು ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಸಹಿ ಹಾಕಿಬಿಟ್ಟು ಬರುತ್ತಾರೆ. ಮತ್ತೆ ಕೆಲವರು ಅಲ್ಲಿರತಕ್ಕ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಒಂದು ತಿಂಗಳು, ಎರಡು ತಿಂಗಳಿಗೊಂದುಸಾರಿ ಹೋಗಿ ಸಹಿ ಮಾಡತಕ್ಕ ಸ್ಟೈಫಂಡರಿಗಳಿದ್ದಾರೆ ಇವರನ್ನು ಈಗ ಮನೆಗೆ ಕಳಿಸಲಿಕ್ಕೆ ಆಗುವುದಿಲ್ಲ. ನಿರುದ್ಯೋಗ ಸಮಸ್ಯೆ ಬರುತ್ತದೆ. ೯–೧೦ ಸಾವಿರ ಕುಟುಂಬಗಳ ಜೀವನದ ಪ್ರಶ್ನೆ ಬರುತ್ತದೆ. ಆದುದರಿಂದ ನಾನು ಮಾನ್ಯ ಯೋಜನಾ ಸಚಿವರ ಗಮನಕ್ಕೆ ಒಂದು ಸಲಹೆಯನ್ನು ತರಲಿಕ್ಕೆ ಇಷ್ಟಪಡುತ್ತೇನೆ. ನಾನು ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದಾಗ ಈ ಒಂದು ಕೆಲಸವನ್ನು ಮಾಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೆ. ಸಾರಿಗೆ ಸಂಸ್ಥೆಯಲ್ಲಿ ಈ ವರ್ಷ ಸುಮಾರು ೧೦,೦೦೦ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾ ಇದ್ದಾರೆ ಇದರಲ್ಲಿ ಬಹಳಷ್ಟು ಜನ ಸ್ಟೈಫಂಡರಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬಹುದು. ಉದಾಹರಣೆಗೆ ಹೇಳುವುದಾದರೆ ೨,೦೦೦ ಜೂನಿಯರ್ ಅಸಿಸ್ಟೆಂಟ್ಸನ್ನು ಸಾರಿಗೆ ಸಂಸ್ಥೆಯಲ್ಲಿ ಈ ವರ್ಷ ರಿಕ್ರೂಟ್‌ಮೆಂಟ್ ಮಾಡುತ್ತಾ ಇದ್ದಾರೆ ೬,೦೦೦ ಕಂಡಕ್ಟರ್ಸ್‌ನ್ನು ರಿಕ್ರೂಟ್‌ಮೆಂಟ್ ಮಾಡುತ್ತಾ ಇದ್ದಾರೆ. ಇದರಲ್ಲಿ ಬೇರೆಯವರಿಗೆ ಅವಕಾಶ ಕೊಡುವುದರ ಬದಲು ಸ್ಟೈಫಂಡರಿಗಳಿಗೆ ಖಾಯಂ ಕೆಲಸವನ್ನು ಕೊಡಬಹುದು. ನಮ್ಮ ಸ್ನೇಹಿತರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೋಸ್ಟರ್ ಪದ್ಧತಿ ಬಗ್ಗೆ ಬಹಳವಾಗಿ ಹೇಳಿದ್ದಾರೆ. ನಾವು ಯಾವತ್ತೂ ರೋಸ್ಟರ್ ಪದ್ಧತಿಗೆ ವಿರೋಧ ಮಾಡಿದವನಲ್ಲ. ಅವರಿಗೆಲ್ಲಾ ಕೆಲಸ ಕೊಡಬೇಕು ಎಂದು ಮಾಡಿದ್ದೇವೆ. ಆದರೆ ಸ್ಟೈಫಂಡರಿಗಳ

ಸಮಸ್ಯೆ ಉದ್ಭವವಾಗಲಿಕ್ಕೆ ಕಾರಣರು ಯಾರು ಎಂದು ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ಸ್ಟೈಫಂಡರಿಗಳ ಬಿಹೇವಿಯರ್ ಕೂಡ ಹಾಗೇ ಇರುತ್ತದೆ. ಯಾರಾದರೂ ಮುಖ್ಯ ಮಂತ್ರಿಯಾದ ತಕ್ಷಣ ತುಲಾಭಾರ ಮಾಡುವಂಥ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾರೆ. ಇವತ್ತಿನದಿವಸ ನಿರುದ್ಯೋಗ ಸಮಸ್ಯೆಯನ್ನ ಮಾನವೀಯ ದೃಷ್ಟಿಯಿಂದ ತೆಗೆದುಕೊಂಡು ನೋಡಿದಾಗ ಇವರಿಗೆ ಕೆಲಸ ಎಲ್ಲಾದರೂ ಒಂದು ಕಡೆ ಕೊಡಬೇಕು. ಸಾರಿಗೆ ಸಂಸ್ಥೆಯಲ್ಲಿ ಬೇರೆ ಬೇರೆ ೧೦ ಸಾವಿರ ಜನರಿಗೆ ಕೆಲಸ ಕೊಡುವುದರ ಬದಲು, ಸಾರಿಗೆ ಸಂಸ್ಥೆಯಲ್ಲಿರತಕ್ಕ ನಿಯಮಗಳನ್ನು ಬದಲಾವಣೆ ಮಾಡಿ ಸ್ಟೈಫಂಡರಿಗಳನ್ನು ರೆಗ್ಯುಲರೈಸ್‌ಮಾಡಿದರೆ, ಈಗ ಏನು ೨-೩ ಕೋಟಿ ರೂಪಾಯಿಗಳನ್ನು ಸ್ಟೈಫಂಡರಿಗಳಿಗೆ ಕೊಡುತ್ತಾ ಇದ್ದೇವೆ ಅದು ಸರ್ಕಾರಕ್ಕೆ ಉಳಿಯುತ್ತದೆ. ಮತ್ತು ಸಾರಿಗೆ ಸಂಸ್ಥೆಯಲ್ಲಿ ಇವರಿಗೆ ಕೆಲಸ ಕೊಟ್ಟ ಹಾಗೂ ಆಗುತ್ತದೆ. ಅಲ್ಲಿ ಸರಿಯಾಗಿ ಕೆಲಸ ಮಾಡಲಿಲ್ಲ ಅಂದರೆ ಕೆ.ಎಸ್.ಆರ್.ಟಿ.ಸಿ. ಅಟಾನಮಸ್ ಬೋರ್ಡ್ (ಬಾಡಿ) ಅವರನ್ನು ಕೆಲಸದಿಂದ ತೆಗೆದುಹಾಕಬಹುದು. ಆದುದರಿಂದ ಮಾನ್ಯ ಯೋಜನಾ ಸಚಿವರಿಗೆ ಹೇಳುವುದೇನೆಂದರೆ, ಸಾರಿಗೆ ಸಂಸ್ಥೆಯಲ್ಲಿ ಅಧಿಕಾರಿಗಳನ್ನು ಕಳಿಸಿ ಹಿಂದಿನ ಪ್ರಪೋಸಲ್ ತರಿಸಿ ೫-೬ ಸಾವಿರ ಜನರನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬಹುದು. ಆಮೇಲೆ ನಮ್ಮ ರಾಜ್ಯದಲ್ಲಿ ಅನೇಕ ಸ್ವಾಯತ್ತ ಸಂಸ್ಥೆಗಳು, ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇವೆ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿರತಕ್ಕ ಕೆಲವು ಅಧಿಕಾರಿಗಳು ಏನು ಮಾಡುತ್ತಾರೆಂದರೆ ಮಂತ್ರಿಗಳು ಹೇಳಿದರೂ ಸಹಿತ ಕೆಲಸ ಕೊಡುವುದಿಲ್ಲ. ಅಧಿಕಾರಿಗಳ ಹತ್ತಿರ ಕೆಲಸಗಳನ್ನು ಮಾಡಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ನಾವು ಹೇಳಿದರೆ ಕುಂಟುನೆಪ ಹೇಳುತ್ತಾರೆ. ಜುಟ್ಟು ಸರಿಯಿಲ್ಲ, ಸರಿಯಾಗಿ ಎಣ್ಣೆ ಹಾಕಿ ಬಾಚಿಲ್ಲ, ಮೂಗು ಸರಿಯಿಲ್ಲ ಎಂದು ಹೇಳಿರತಕ್ಕ ಉದಾಹರಣೆಗಳಿವೆ. ಆದರೆ ಅವರಿಗೆ ಬೇಕಾಗಿರತಕ್ಕವರನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಾರೆ. ರಾಜ್ಯದಲ್ಲಿರತಕ್ಕ ಹಲವಾರು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ರೆಕ್ರೂಟ್‌ಮೆಂಟ್‌ನಲ್ಲಿ ಹಿಂದುಳಿದ ಜಾತಿಯವರಿಗೆ, ಪರಿಶಿಷ್ಟ ಜನಾಂಗದವರಿಗೆ ಅನ್ಯಾಯವಾಗಿದೆ. ಸಾರಿಗೆ ಸಂಸ್ಥೆಯಲ್ಲಿ ೪೨ ಸಾವಿರ ಕಾರ್ಮಿಕರಲ್ಲಿ ೪ ಪರ್ಸೆಂಟ್ ಹರಿಜನರೂ ಇರಲಿಲ್ಲ. ಮಾನ್ಯ ಖರ್ಗೆಯವರು, ಮಾನ್ಯ ತಿಪ್ಪೇಸ್ವಾಮಿಯವರು ಹರಿಜನ-ಗಿರಿಜನರ ಬಗ್ಗೆ ಮಾತನಾಡುತ್ತಾರೆ. ಸಾರಿಗೆ ಸಂಸ್ಥೆಯಲ್ಲಿ ಈ ಬಗ್ಗೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದು ಅವರಿಗೆ ಗೊತ್ತಿದೆ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಬೇಕಾದಷ್ಟು ಹುದ್ದೆಗಳು ಹಿಂದುಳಿದ ವರ್ಗದ ಜನರಿಗೆ, ಹರಿಜನರಿಗೆ ಸಿಕ್ಕಿಲ್ಲ. ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೂ ಅನ್ಯಾಯವಾಗುತ್ತಿದೆ. ಬೇಕು ಬೇಕಾದವರಿಗೆ ರೆಕ್ರೂಟ್‌ಮೆಂಟ್‌ಗಳನ್ನು ಮಾಡಿಕೊಳ್ಳುತ್ತಾ ಇದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ೩ ತಿಂಗಳು ಟೆಂಪೊರರಿ, ೬ ತಿಂಗಳು ಟೆಂಪೊರರಿ ಎಂದು ಹೇಳುತ್ತಾರೆ. ಮಾನ್ಯ ಸಭಾಧ್ಯಕ್ಷರು ಹೇಳಿದರೂ ಕುಂಟು ನೆಪ ಕೊಡುತ್ತಾರೆ. ಒಬ್ಬ ಲೇಮನ್‌ಗೆ ಕೆಲಸ ಕೊಡಿಸುವುದು ಕಷ್ಟ. ಆದುದರಿಂದ ನಾನು ಹೇಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಇರುವ ಸಾರ್ವಜನಿಕ ಉದ್ದಿಮೆಗಳಲ್ಲಿ ಬೇಕಾದಷ್ಟು ಕೆಲಸಗಳು ಖಾಲಿ ಇವೆ, ಅಲ್ಲಿರತಕ್ಕ ಅಧಿಕಾರಿಗಳು ತಮ್ಮ ಇಚ್ಛೆ ಪ್ರಕಾರ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಾರೆ. ಅದಕ್ಕೆ ಬದಲಾಗಿ ಕೆಲವು ಬೋರ್ಡ್‌ಗಳಿಗೆ ಅಟಾನಮಸ್ ಸ್ಟೇಟಸ್ ಇರುವುದರಿಂದ ರೆಕ್ರೂಟ್‌ಮೆಂಟ್ ನಿಯಮಗಳನ್ನು ಸಡಿಲ ಮಾಡಿದರೂ ೧೦,೦೦೦ ಸ್ಟೈಫಂಡರಿಗಳಿಗೆ ಕೆಲಸ ಕೊಡಬಹುದು. ಕೆಲಸ ಕೊಟ್ಟ ಮೇಲೆ ಅವರಿಂದ ಕೆಲಸ ನಿರೀಕ್ಷೆ ಮಾಡಬಹುದು. ಈಗ ರಾಜ್ಯದ ಬೊಕ್ಕಸದಿಂದ ೩-೪ ಕೋಟಿ ರೂಪಾಯಿ ಏನು ಕೊಡುತ್ತಿದ್ದೇವೆ ಅದು ನಿಲ್ಲುತ್ತದೆ. ಇವರಿಗೆ ಉದ್ಯೋಗ ಸಿಗುತ್ತದೆ, ಸ್ಟೈಫಂಡರಿಗಳ ಸಮಸ್ಯೆ ಪರಿಹಾರವಾಗುತ್ತದೆ. ಈ ಕೆಲವು ಸಲಹೆಗಳನ್ನು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸ್ಟೈಫಂಡರಿ ಪದವೀಧರರ ವಿಚಾರವಾಗಿ ಸುದೀರ್ಘವಾಗಿ ಚರ್ಚೆಯಾಗಿದೆ, ಹಿಂದೆ ಕೂಡ ಆಗಿತ್ತು, ಇವತ್ತೂ ಕೂಡ ಆಗಿದೆ. ಇಂದು ಮಾತನಾಡಿದಂತಹ ಸದಸ್ಯರು, ಮಾತನಾಡದೇ ಇರತಕ್ಕಂತಹ ಸದಸ್ಯರ ಅಭಿಪ್ರಾಯ ಕೂಡ ಅವರನ್ನು ಖಾಯಂಗೊಳಿಸತಕ್ಕಂಥಾದ್ದರ ಬಗ್ಗೆ ಒಮ್ಮತ ಇದೆ. ಸರಕಾರದ ಒಮ್ಮತ ಕೂಡ ಇದೆ. ಹಿಂದೆ ಇದ್ದ ಸರಕಾರವಾಗಲೀ, ನಮ್ಮ ಸರಕಾರವಾಗಲೀ ಈ ಕೆಲಸ ಮಾಡುವುದರ ಬಗ್ಗೆ, ಖಾಯಂ ಮಾಡುವುದರ ಬಗ್ಗೆ ಯಾವಾಗಲೂ ಭಿನ್ನಾಭಿಪ್ರಾಯ ಇಲ್ಲ, ಒಮ್ಮತ ಇದೆ. ಇವತ್ತು ಸರಕಾರ ಏನಾದರೂ ಆಜ್ಞೆ, ಕಾನೂನು ಮಾಡಬೇಕಾದರೆ ಈ ಸಭೆಯ ಒಮ್ಮತವಿದ್ದರೂ ಕೂಡ ರಾಜ್ಯಾಂಗದ ಒಂದು ನೀತಿ, ನಿರೂಪಣೆ ಏನಿದೆ, ನ್ಯಾಯಾಲಯಗಳ ತೀರ್ಪುಗಳು ಏನಿವೆ ಅವನ್ನು

ಬದಿಗೊತ್ತಿ ಮಾಡುವುದಕ್ಕಾಗುವುದಿಲ್ಲ. ಒಮ್ಮತದ ಅಭಿಪ್ರಾಯವಿದ್ದರೂ ಸರಕಾರ ಆಜ್ಞೆ ಹೊರಡಿಸಿದರೂ ಕೋರ್ಟಿನಲ್ಲಿ ಹೋಗಿ ಪ್ರಶ್ನಿಸಿದರೆ ಅದು ನಿಲ್ಲುವುದಿಲ್ಲ, ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಗೆ ಪರಿಹಾರ ಹುಡುಕಬೇಕಾಗಿದೆ. ಮಾನ್ಯ ಮೊಯಿಲಿಯವರು ಹೇಳಿದರು ನೀವು ಬಂದ ಮೇಲೆ ಏನು ಮಾಡಿದ್ದೀರಿ ಎಂದು, ಏನು ಮಾಡಿದ್ದೇವೆಂದು ಅವರಿಗೆ ಗೊತ್ತಿದೆ. ಹೈಕೋರ್ಟಿನ ಸೂಚನೆಯ ಮೇರೆಗೆ ೫೦ ಪರ್ಸೆಂಟ್ ಸ್ಥಾನಗಳನ್ನು ಮೀಸಲಾಗಿಟ್ಟು ಇವರ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ನಾಲ್ಕು ವರ್ಷಗಳಲ್ಲಿ ೫,೦೦೦ ಜನರಿಗೆ ಕೆಲಸ ಸಿಕ್ಕಿದೆ, ಸಂಬಳ, ವಯೋಮಿತಿ ಹೆಚ್ಚು ಮಾಡಿರುವಂಥಾದ್ದು, ಅದು ಬೇರೆ ವಿಚಾರ. ನಿಯಮಗಳನ್ನು ಮಾಡುವಾಗ ಕಾನೂನು ಇಲಾಖೆಯ ಅಭಿಪ್ರಾಯ, ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯಗಳನ್ನು ಪಡೆದುಕೊಂಡು ಮಾಡಿದ್ದೇವೆ. ಆದರೂ ಕೂಡ ಈ ಸಮಸ್ಯೆ ಪೂರ್ತಿಯಾಗಿ ಪರಿಹಾರವಾಗಿಲ್ಲ. ಅವರು ಹೇಳಿದರು ಪೊಲಿಟಿಕಲ್ ವಿಲ್‌ನಿಂದ ಸವಾರಿ ಮಾಡುತ್ತಿದ್ದಾರೆ ಎಂದು. ಸರಕಾರ ಸವಾರಿ ಮಾಡತಕ್ಕಂಥಾ ಪೊಲಿಟಿಕಲ್ ವಿಲ್ ಸಾಕಷ್ಟು ಇದೆ, ಅದಕ್ಕೇನೂ ಕಡಿಮೆ ಇಲ್ಲ. ಇವತ್ತು ರಾಜ್ಯದಲ್ಲಿ ಸುಮಾರು ೬೦.೦೦೦ ಜನ ೧೫-೨೦ ವರ್ಷಗಳಿಂದ ಖಾಯಂ ಆಗದೇ ಬೇರೆ ಬೇರೆ ಇಲಾಖೆಯಲ್ಲಿ, ಬೇರೆ ಬೇರೆ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ. ಖಾಯಂ ಮಾಡುವುದಕ್ಕೆ ನಿರ್ಣಯ ಮಾಡಿದ್ದೇವೆ. ಸುಪ್ರೀಂ ಕೋರ್ಟ್ ನಿರ್ಣಯ ಬರುವುದಕ್ಕಿಂತ ಮೊದಲೇ ಮಾಡಿದ್ದೇವೆ. ೪,೦೦೦ ಜನರನ್ನು ಖಾಯಂ ಮಾಡಿದ್ದೇವೆ. ನಿಮಗೆ ಪೊಲಿಟಿಕಲ್ ವಿಲ್ ಇದ್ದಾಗ ಇದನ್ನು ಮಾಡಬಹುದಾಗಿತ್ತು. ೧೫ ವರ್ಷದಿಂದ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಇರಬಹುದು. ಡೈಲೀವೇಜಸ್ ನಲ್ಲಿ ಇದ್ದವರಿರಬಹುದು, ಅವರನ್ನು ಖಾಯಂ ಮಾಡಿದ್ದೇವೆ. ೧೪-೧೫ ವರ್ಷಗಳಿಂದ ಆಗಿರಲಿಲ್ಲ. ಮೂರು ವರ್ಷದಲ್ಲಿ ನಾವು ಮಾಡಿದ್ದೇವೆ. ಪೊಲಿಟಿಕಲ್ ವಿಲ್‌ನಲ್ಲಿ ಸವಾರಿ ಮಾಡತಕ್ಕಂತಹ ಶಕ್ತಿ ಇದೆ, ಅದನ್ನು ಪ್ರಯೋಗ ಮಾಡುತ್ತಿದ್ದೇವೆ. ಮಾನ್ಯ ಬಂಗಾರಪ್ಪನವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಎಂದು ನಮ್ಮ ಗಮನಕ್ಕೆ ತಂದರು ಇದಲ್ಲದೆ ಬೇರೆ ಬೇರೆ ವಿಚಾರವಾಗಿ ವಾಗ್ದಾನಗಳನ್ನು ಕೂಡ ಮಾಡಿದ್ದೇವೆಂದು ನೆನಪು ಮಾಡಿ ಕೊಟ್ಟರು ಸಂತೋಷ. ನಾನು ಇಷ್ಟೇ ಹೇಳಬಯಸುತ್ತೇನೆ. ೧೯೮೩ನೇ ಚುನಾವಣೆಗಿಂತ ಮೊದಲು ನಾವು ಅವರ ಜಂಟಿಯಾಗಿ ಚುನಾವಣಾ ಪ್ರಣಾಳಿಕೆಯನ್ನು ಜನತೆಗೆ ಕೊಟ್ಟಿದ್ದೇವೆ. ೧೯೮೫ನೇ ಇಸವಿಯಲ್ಲಿ ಜನತಾ ಪಕ್ಷ ಕೊಟ್ಟಿದೆ. ತಾವು ನಮ್ಮ ಪ್ರಣಾಳಿಕೆಯನ್ನು ತೆಗೆದು ನೋಡಿದಾಗ ಗೊತ್ತಾಗುತ್ತದೆ. ಒಂದೊಂದಾಗಿ ಹಂತಹಂತವಾಗಿ ಬಹುತೇಕವಾದಂತಹ ವಾಗ್ದಾನಗಳನ್ನು ಪೂರೈಸಿದ್ದೇವೆಂದು ನಿಮಗೇ ಗೊತ್ತಾಗುತ್ತದೆ. ನಾವು ರೆಫರ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಬೇರೆ ಬೇರೆ ವಾಗ್ದಾನಗಳನ್ನು ಕಂಪ್ಲೀಟ್ ಮಾಡಿ ಮುಗಿಸಿದ್ದೀರಿ, ಅವರದ್ದೇನೂ ತೊಂದರೆಯಿಲ್ಲ. ಇದರ ಬಗ್ಗೆ ಮಾತ್ರ ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕದ ಜನಕ್ಕೆ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—ಅವರನ್ನು ಮುಗಿಸುವುದಕ್ಕೆ ನಾವು ಯಾವ ಸಮಯದಲ್ಲೂ ಪ್ರಯತ್ನ ಮಾಡುವುದಿಲ್ಲ, ಈಗಿರುವ ಸ್ಥಿತಿ ನೋಡಿದರೆ ಅವರನ್ನು ಅವರೇ ಮುಗಿಸಿಕೊಳ್ಳುತ್ತಾರೆ. ಅವರೇನೂ ಬದುಕುವ ಹಾಗೆ ಕಾಣಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಪರಿಸ್ಥಿತಿಯ ಬಗ್ಗೆ ಕೂಡ ಪತ್ರಿಕೆಯು ಬಂದಿದೆ, ಮೆಮೊರ್ಯಾಂಡಮ್ ಅನ್ನು ನೋಡಿದರೆ ನಿಮ್ಮನ್ನು ನೀವೇ ಮುಗಿಸಿಕೊಳ್ಳುತ್ತೀರಿ, ನಮಗೇ ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲವೇ ಹೇಳುತ್ತದೆ ಯಾರನ್ನು ಯಾರು ಮುಗಿಸುತ್ತಾರೆಂದು. ಈ ವಿಚಾರದಲ್ಲಿ ಅನುಕಂಪ, ಅಂತಃಕರಣ ಎಲ್ಲರಲ್ಲೂ ಒಂದೇ ಇದೆ. ಕಾನೂನು ಚೌಕಟ್ಟಿನಲ್ಲಿ ಇದಕ್ಕೆ ಪರಿಹಾರ ಒದಗಿಸಿಕೊಡಬೇಕಾಗಿದೆ. ಮಾನ್ಯ ಮೊಯಿಲಿಯವರು, ಸಿಂಧ್ಯಾರವರು ಹಾಗೂ ಮಾನ್ಯ ಖರ್ಗೆಯವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳುತ್ತೇನೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಆ ಮನೆಯ ಮಾನ್ಯ ಸದಸ್ಯರಿಗೆ ಹೇಳಿದ್ದಾರೆ ಈ ಸಮಸ್ಯೆಗೆ ಆದಷ್ಟು ಬೇಗ ಪರಿಹಾರ ಕಂಡುಹಿಡಿದು ಇತ್ಯರ್ಥ ಮಾಡಿ ಎಲ್ಲರನ್ನೂ ಖಾಯಂ ಮಾಡತಕ್ಕಂತಹದ್ದು ಸರಕಾರದ ನೀತಿಯಾಗಿದೆ ಎಂದು. ಈ ಬಗ್ಗೆ ನಾನೂ ಭರವಸೆ ಕೊಡುತ್ತಿದ್ದೇನೆ. ಮಾನ್ಯ ಬಸವಲಿಂಗಪ್ಪನವರು, ಖರ್ಗೆಯವರು ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ, ಪರಿಶಿಷ್ಟ

ಜಾತಿ ಪರಿಶಿಷ್ಟ ವರ್ಗದವರಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಈ ಸ್ಟೈಪೆಂಡರಿ ಪದವೀಧರರಿಗೆ ನ್ಯಾಯಂ ಕೊಡತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಈ ಬಗ್ಗೆ ಕಾನೂನು ಇಲಾಖೆಯ ಸಲಹೆ ತೆಗೆದುಕೊಳ್ಳುತ್ತೇನೆ. ಅವಶ್ಯ ಬಿದ್ದರೆ ಮಾನ್ಯ ಸದಸ್ಯರುಗಳನ್ನು ಕರೆದು ಅವರ ವಿಚಾರಗಳನ್ನು ತಿಳಿದು ಕೊಂಡು ಕೂಡಲೇ ಈ ಸಮಸ್ಯೆಗೆ ಪರಿಹಾರ ಒದಗಿಸಿಕೊಡತಕ್ಕಂತಹ ಭರವಸೆ ಕೊಡುತ್ತೇನೆ. ಅವರು ಈಗ ಸರಕಾರಿ ನೌಕರರಿದ್ದಾರೆ, ಪದೇ ಪದೇ ಈ ರೀತಿ ಧರಣಿ ಸತ್ಯಾಗ್ರಹ ಮಾಡುವುದರಿಂದ ಸರಕಾರದ ಆಡಳಿತದ ಮೇಲೆ ಒಂದು ದುಷ್ಪರಿಣಾಮವಾಗುತ್ತದೆ, ಇದರ ಬಗ್ಗೆ ಸರಕಾರ ಆಲೋಚನೆ ಮಾಡು ತ್ತಿದೆ. ಈ ಮನೆಯ ಎಲ್ಲಾ ಸದಸ್ಯರ ಸಹಾನುಭೂತಿ ಇದೆ. ಕಾನೂನು ಚೌಕಟ್ಟಿನಲ್ಲಿ ಇದನ್ನು ಇತ್ಯರ್ಥ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರೆಲ್ಲಾ ಬಂದು ಇಲ್ಲಿ ಸೇರದಿದ್ದರೆ ಸಹಾನುಭೂತಿ ಬರು ತ್ತಿರಲಿಲ್ಲ, ಇಲ್ಲಿ ಇಷ್ಟೊಂದು ಚರ್ಚೆಯಾಗುತ್ತಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೊಂದೇ ಅಲ್ಲ. ನಾವು ಎಲ್ಲೆಲ್ಲಿ ಪ್ರವಾಸ ಹೋಗುತ್ತೇ ವೆಯೋ ಆ ಪ್ರತಿಯೊಂದು ತಾಲ್ಲೂಕಿಗೂ, ಪ್ರತಿ ಜಿಲ್ಲೆಗೂ ಇವರು ಬಂದಿದ್ದಾರೆ, ತಮ್ಮ ಕಷ್ಟಗಳನ್ನು ಹೇಳಿದ್ದಾರೆ ಅದು ಸರಕಾರದ ಪರಿಶೀಲನೆಯಲ್ಲಿದೆ, ಅದನ್ನು ಕೈ ಬಿಟ್ಟಿಲ್ಲ. ಮಾನ್ಯ ಮೊಯಿಲಿ ಯವರಿಗೂ ಇದರ ಅನುಭವವಾಗಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಾಮಾಣಿಕವಾಗಿ ಕೇಳುತ್ತೇನೆ ಒಂದು ಪಕ್ಷ ೧೦—೧೨ ಸಾವಿರ ಜನ ಬರದಿದ್ದರೆ, ಸತ್ಯಾಗ್ರಹ ಮಾಡದಿದ್ದರೆ, ಈ ಮನೆ ಆ ವಿಚಾರವಾಗಿ ಸೀರಿಯಸ್ ಆಗಿ ಯೋಚನೆ ಮಾಡುತ್ತಿತ್ತೇ ? ಗಹನವಾಗಿ ಚರ್ಚೆ ಮಾಡುತ್ತಿತ್ತೇ ? ತಾವು, ಸಹಾನುಭೂತಿ ತೋರಿಸು ತ್ತಿದ್ದೀರಾ ?

೩—೦೦ ಪಿ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಹಿಂದೆ ಚರ್ಚೆಯಾಗಿದೆ ಎಂದು ಅಲ್ಲ. ಅದರ ಜೊತೆಗೆ ಸರ್ಕಾರ ಈ ಆಜ್ಞೆ ಹೊರಡಿಸುವಾಗ ಪುನಃ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ ಕಾನೂನು ಇಲಾಖೆ ಯಲ್ಲಿ ಚರ್ಚೆ ಮಾಡುತ್ತಿದ್ದೇವೆ, ಈ ಬಗ್ಗೆ ಯಾವರೀತಿ ಇತ್ಯರ್ಥ ಮಾಡಬೇಕೆನ್ನುವುದು ನಡೆಯುತ್ತಿ ದೆಯೇ ಹೊರತು ಅದು ನಿಂತಿಲ್ಲ. ಯಾವಾಗಲಾದರೂ ಇದನ್ನು ಮಾಡಲೇಬೇಕೆಂದು ಶೀಘ್ರವಾಗಿ ವಿಚಾರ ಮಾಡುತ್ತಿದ್ದೇವೆ. ಆಂಧ್ರ ಮತ್ತು ಬೇರೆ ರಾಜ್ಯಗಳಲ್ಲಿ ಇದರ ಬಗ್ಗೆ ಮಾಡಿರುವುದನ್ನು ಸಹ ತರಿಸಿಕೊಂಡು ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರುಗಳು ತಮ್ಮ ತಮ್ಮ ಊರಿಗೆ ಹೋಗುವುದಕ್ಕೆ ಏನಾ ದರೂ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವಾಗಿ ಮಾನ್ಯ ಬಂಗಾರಪ್ಪನವರು ಇಂದೇ ಹೇಳಿ ಬಿಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಇಂದೇ ಹೇಳಲಿಕ್ಕೆ ಬರುವುದಿಲ್ಲ. ಅದು ರಾಜ್ಯಾಂಗಕ್ಕೆ ವಿರುದ್ಧವಾಗಿ ಆದರೆ, ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ವಿರುದ್ಧವಾಗಿ ಆದರೆ ಅದು ನಿಲ್ಲುವುದಿಲ್ಲ. ಸರ್ಕಾರ ಇನ್ನು ಹೆಚ್ಚು ಸಮಯ ತೆಗೆದುಕೊಳ್ಳದೇ ಮಾಡುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿ ಗಳು ಹೇಳಿದ್ದಾರೆ, ನಾನು ಹೇಳಿದ್ದೇನೆ. ಅಡ್ವೋಕೇಟ್ ಜನರಲ್ ಅವರನ್ನು ಕರೆಸಿ ಬೇಗ ಇತ್ಯರ್ಥ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ ಈ ವಿಚಾರದಲ್ಲಿ ಅವರು ಕೂಡ ಸಹಾನುಭೂತಿ ವ್ಯಕ್ತಪ ಡಿಸಿದ್ದಾರೆ. ನ್ಯಾಯಂ ಮಾಡತಕ್ಕದ್ದು ಸರ್ಕಾರದ ಅಭಿಪ್ರಾಯ ಇದೆ ಎಂದು ಹೇಳಿದ್ದಾರೆ, ಅಷ್ಟರ ಮಟ್ಟಿಗೆ ಒಪ್ಪುತ್ತೇನೆ. ಶೀಘ್ರವಾಗಿ ಎಂದು ಹೇಳಿದ್ದಾರೆ, ಹಾಗೆಯೇ ಆಂಧ್ರಪ್ರದೇಶದಲ್ಲಿ ನ್ಯಾಯಂ ಮಾಡಿರುವ ಬಗ್ಗೆ ತೀರ್ಮಾನ ತರಿಸಿಕೊಂಡು ನೋಡುತ್ತೇವೆಂದು ಹೇಳಿದ್ದಾರೆ. ಕಾಲಮಿತಿ ಇಲ್ಲದೇ ಇದ್ದರೆ ಹೇಗೆ ವರ್ಕ್ ಮಾಡುತ್ತಾರೆ ಅದು ನಿಮಗೂ ಗೊತ್ತಿದೆ. ಆದ್ದರಿಂದ ಏನಾದರೂ ಒಂದು

ಅಂತಿಮ ತೀರ್ಮಾನ ಮಾಡಲೇಬೇಕಾಗುತ್ತದೆ. ಆದ್ದರಿಂದ, ಕಾಲಮಿತಿ ಸ್ಪಷ್ಟಪಡಿಸಿ ೧೫ ದಿವಸದಲ್ಲಿ ಅಥವಾ ಒಂದು ತಿಂಗಳಲ್ಲಿ ಮಾಡುತ್ತೇವೆಂದು ಹೇಳಿ ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆಂಧ್ರದಿಂದ ತರಿಸತಕ್ಕದ್ದು ದೊಡ್ಡ ವಿಚಾರ ಅಲ್ಲ. ಕಾನೂನು ಇಲಾಖೆ ನಮ್ಮಲ್ಲಿಯೇ ಇದೆ, ಅವರನ್ನು ಕನ್ಸಲ್ಟ್ ಮಾಡಿ, ಅಡ್ವೋಕೇಟ್ ಜನರಲ್ ಅವರನ್ನು ಕರೆಸಿಕೊಂಡು ತೀರ್ಮಾನ ಮಾಡಿ. ಕಾಲಮಿತಿಯನ್ನು ಸ್ಪಷ್ಟವಾಗಿ ಹೇಳಿ. ಶೀಘ್ರವಾಗಿ ಅಂದರೆ ಮತ್ತೆ ಈ ವಿಚಾರ ಹಾಗೇ ಉಳಿಯುತ್ತದೆ. ಮತ್ತೆ ಅವರು ಚಳುವಳಿ ಮಾಡುವಂತಾದ್ದು ಇದಕ್ಕೆಲ್ಲಾ ಅವಕಾಶ ಆಗಬಹುದು, ಖಾಯಂಗೊಳಿಸುವ ನೀತಿಯನ್ನು ಒಪ್ಪಿಕೊಂಡಿದ್ದೀರಿ, ಕಾಲ ಮಿತಿಯನ್ನು ಹೇಳಿದರೆ ನನಗೆ ಅಷ್ಟೇ ಸಾಕು.

ಶ್ರೀ ಪಂಪಾಪತಿ.—ಅಧ್ಯಕ್ಷರೆ,......

ಅಧ್ಯಕ್ಷರು.—ಕಾಂಗ್ರೆಸ್ ಪಕ್ಷದಿಂದ ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ, ಈಗ ಮಾನ್ಯ ಕೃಷ್ಣನ್‌ರವರು ಮಾತನಾಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಸರ್ಕಾರದಲ್ಲಿ ಅರ್ಜೆಂಟ್ ಎಂದರೆ ೬ ತಿಂಗಳು ಎಂದು ಹೇಳುತ್ತಾರೆ. ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಇನ್ನೊಂದು ವಿಷಯ ಪ್ರಸ್ತಾಪ ಮಾಡಿದೆವು, ಮುಖ್ಯಮಂತ್ರಿಗಳು ಇದ್ದಾಗ ಎಲ್ಲರನ್ನೂ ಕರೆಸಿ ಚರ್ಚೆ ಮಾಡಿ ಎರಡು ದಿವಸದಲ್ಲಿಯೇ ಮಾಡುತ್ತೇವೆಂದು ಹೇಳಿದಿರಿ ಅದರ ಬಗ್ಗೆ ಈಗ ತಮ್ಮ ನಿಲುವು ಸ್ಪಷ್ಟಪಡಿಸಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಅಧಿವೇಶನ ಮುಗಿದ ಕೂಡಲೇ ಸಂಬಂಧಪಟ್ಟ ಸದಸ್ಯರಿಗೆ ನಾನು ಒಂದು ವಾರದಲ್ಲಿಯೇ ಕರೆಯುತ್ತೇನೆ, ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರನ್ನು ಖಾಯಂ ಮಾಡುವುದರ ಬಗ್ಗೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಭಿಪ್ರಾಯ ಇಲ್ಲಿ ಹೇಳುವುದೇ ಬೇರೆಯಾಗುತ್ತದೆ, ಏಕೆಂದರೆ, ಕಾನೂನು ಒಳಪಟ್ಟಂತೆ ಯಾವರೀತಿ ಮಾಡಬೇಕೆಂದು ಇಲ್ಲಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಆ ಕಡೆಯ ಮತ್ತು ಈ ಕಡೆಯ ಸದಸ್ಯರನ್ನು ನಾನು ಇನ್ನು ಒಂದು ವಾರದಲ್ಲಿಯೇ ಕರೆದು ಸಭೆ ಮಾಡುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಎಲ್ಲ ಸದಸ್ಯರು ತಮ್ಮ ಅಭಿಪ್ರಾಯವನ್ನು ಇಲ್ಲಿಯೇ ಹೇಳಿರುವುದರಿಂದ ಮತ್ತೆ ಪುನ: ತಮ್ಮ ಕೊಠಡಿಯಲ್ಲಿ ಚರ್ಚೆಯಾಗುವುದರ ಅವಶ್ಯಕತೆ ಇದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಚರ್ಚೆ ಯಾವುದರ ಬಗ್ಗೆ, In principle we have agreed to make them permanent. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ಮಾಡಬೇಕೆಂದು ಸಲಹೆ ಕೊಡುವುದು ಅಷ್ಟೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರಿಗೆ ಹಾಫ್ ಮಿಲಿಯನ್ ಜಾಬ್‌ನಲ್ಲಿ ಎಂಪ್ಲಾಯ್‌ಮೆಂಟ್ ಕೊಟ್ಟಿರುವುದು. ಇದು ನಮ್ಮ ರಾಜ್ಯ ಒಂದಕ್ಕೆ ಸಂಬಂಧಪಟ್ಟಿದ್ದಲ್ಲ. ಈಗಾಗಲೇ ಆಂಧ್ರ ರಾಜ್ಯದವರು ಕನ್‌ಫರಮ್ ಮಾಡಿದ್ದಾರೆ. ಆದ್ದರಿಂದ, ಇಲ್ಲಿಯೂ ಕನ್‌ಫರಮ್ ಮಾಡುವುದು ಒಳ್ಳೆಯದು. ಈ ಬಗ್ಗೆ ಒಪ್ಪಿಕೊಂಡರೆ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಅವರಿಗೆ ೪೫೦ ರೂಪಾಯಿ ಕೊಡುತ್ತಿದ್ದೀರಿ ಅದರ ಜೊತೆಗೆ ಈಗ ಡಿ.ಎ. ಕೊಡುವುದಕ್ಕೂ ಒಪ್ಪಿಕೊಂಡಿದ್ದೀರಿ, ಹಾಗೆಯೇ ಟಿ.ಎ. ಡಿ.ಎ. ಕೂಡ ಜಾಸ್ತಿ ಮಾಡಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಸರ್ಕಾರ ಈ ರೀತಿ ಸ್ಪಷ್ಟ ನಿಲುವು ತೆಗೆದುಕೊಂಡಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಅವರ ಜೀವನಕ್ಕೆ ಒಂದು ದಾರಿ ಮಾಡಿಕೊಟ್ಟು ಒಂದು ಐತಿಹಾಸಿಕ ತೀರ್ಮಾನ ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಬಿ.ಎ. ಉಮರಬ್ಬ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನಿಮ್ಮ ಆಕಾಂಕ್ಷೆ ಈಡೇರಿಸುತ್ತೇವೆ ಬಹಿಷ್ಕಾರ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ಅನುಕೂಲ ಆಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ನಾನು ಒಂದು ಸಲಹೆ ಕೊಟ್ಟಿದ್ದೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಬೇಕಾದಷ್ಟು ರೆಕ್ರೂಟ್‌ಮೆಂಟ್ ಆಗುತ್ತದೆ. ಉದಾಹರಣೆಗೆ ಕೆಎಸ್‌ಆರ್‌ಟಿಸಿ.ಯಲ್ಲಿ ರೆಕ್ರೂಟ್‌ಮೆಂಟ್ ಮಾಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಷಯವನ್ನು ಡೈವರ್ಟ್ ಮಾಡುತ್ತಿದ್ದಾರೆ, ಅದು ಬೇಡ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಒಂದು ಆಶ್ವಾಸನೆಯ ಮೇರೆಗೆ ಅವರು ಚಳುವಳಿ ನಿಲ್ಲಿಸಿ, ವಾಪಸ್ಸು ಹೋಗುವಂತೆ ಮಾನ್ಯ ಮಂತ್ರಿಗಳು ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು, ಮುಂದೆ ಮಾನ್ಯ ಕಾನಡೆಯವರು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯತಕ್ಕದ್ದು.

ವರಾಹಿ ಯೋಜನೆಯ ನಿರ್ಮಾಣ ಕಾಲದಲ್ಲಿ ಕಡಿದ ಮರಗಳ ಮಾರಾಟದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ವರಾಹಿ ಯೋಜನೆಯ ನಿರ್ಮಾಣ ಕಾಲದಲ್ಲಿ ಕಡಿದ ಮರಗಳ ಮಾರಾಟದಲ್ಲಿ ಅವ್ಯವಹಾರ ನಡೆದಿರುವ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇವೆ.

ಶ್ರೀ ಜೆ. ಎಸ್. ದೇಶಮುಖ್ —(ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು) ಅಧ್ಯಕ್ಷರೆ,

ಜಾಗೃತ ಆಯೋಗದ ಶಿಫಾರಸ್ಸಿನ ಮೇಲೆ ಸರ್ಕಾರವು, ಸರ್ಕಾರಕ್ಕೆ ಆದ ನಷ್ಟವನ್ನು ಮತ್ತು ಜವಾಬ್ದಾರಿಯನ್ನು ಪರಿಶೀಲಿಸಿ, ನಿಗಧಿಪಡಿಸಲು ಹೈ ಲೆವಲ್ ಟೀಮನ್ನು ನಿಯಮಿಸಿತು.

ಹೈ ಲೆವೆಲ್ ಟೀಮ್ ಈಗಾಗಲೇ ಬಹಳಷ್ಟು ಪ್ರಗತಿಯನ್ನು ಈ ವಿಷಯದಲ್ಲಿ ಸಾಧಿಸಿ, ಅಂತಿಮ ಘಟ್ಟದಲ್ಲಿದೆ. ಬೇಕಾದ ದಾಖಲೆಗಳು ಪೂರ್ಣವಾಗಿ ದೊರೆಯದಿರುವುದರಿಂದಾಗಿ ಟೀಮಿನ ಕೆಲಸವು ತಡವಾಗಿದ್ದು, ನಿಗಧಿಪಡಿಸಿದ ಸಮಯದಲ್ಲಿ ತನಿಖೆಯನ್ನು ಸಂಪೂರ್ಣಗೊಳಿಸಲು ಆಗಿರುವುದಿಲ್ಲ. ಸಂಪೂರ್ಣ ವರದಿಯನ್ನು ಸಲ್ಲಿಸಲು ಇನ್ನು ಹೆಚ್ಚಿನ ಸಮಯವನ್ನು ಕೇಳಿರುತ್ತಾರೆ. ಸಮಿತಿಯು ಸುಮಾರು ೨ ತಿಂಗಳ ಅವಧಿಯಲ್ಲಿ ತನಿಖೆಯನ್ನು ಸಂಪೂರ್ಣಗೊಳಿಸಿ, ವರದಿಯನ್ನು ಸಲ್ಲಿಸುವ ಸಂಭವ ಇದೆ.

ಹೈ ಲೆವೆಲ್ ಟೀಮಿನ ಸಂಪೂರ್ಣ ವರದಿ ಬಂದಕೂಡಲೇ ಸರ್ಕಾರವು ವರದಿಯನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಕಳುಹಿಸಿದ್ದು ೧೯೮೩ನೇ ಇಸವಿಯಲ್ಲಿ, ೧೯೮೫ನೇ ಇಸವಿಯಲ್ಲಿ ಸಿಕ್ಕಿದೆ. ಇನ್ನು ಯಾವ ತರಹ ವರದಿ ಇವರಿಗೆ ಬೇಕು. ಆಫೀಸರ್ ಲೇವಾದೇವಿ ಮಾಡಿದ ವರದಿ ಬರಬೇಕೇನು? ಅಧ್ಯಕ್ಷರೆ, ವರದಿ ಇಲ್ಲಿದೆ, ನಾನು ಓದಲೇ. ಈ ತರಹ ಉತ್ತರವನ್ನು ಮಾನ್ಯ ಮಂತ್ರಿಗಳು ಏತಕ್ಕೆ ಹೇಳುತ್ತಾರೆ. ಅಧಿಕಾರಿಗಳನ್ನು ರಕ್ಷಣೆ ಮಾಡಬೇಕೆಂದು ಹೇಳುತ್ತಿದ್ದಾರೋ, ಹೇಗೆ? ೨೦ ಮಂದಿ ಸಿಬ್ಬಂದಿಯನ್ನು ಸಸ್ಪೆಂಡ್ ಮಾಡಬೇಕೆಂದು ಅಲ್ಲಿಗೆ ಕಮಿಟಿಯವರು ಕೂಡ ಹೋಗಿ ನೋಡಿ ತೀರ್ಮಾನ ಮಾಡಿದ್ದಾರೆ. ೪೩ ಲಕ್ಷ ರೂಪಾಯಿ ಅವ್ಯವಹಾರ ನಡೆದಿದೆ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಇವೆ. ಟೆಂಡರ್ ಕರೆಯುವುದರಲ್ಲಿಯೂ ಅವ್ಯವಹಾರ ನಡೆದಿದೆ. ಸರ್ಕಾರ ಇದನ್ನೆಲ್ಲಾ ಒಪ್ಪಿಕೊಂಡಿದ್ದರೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ? ಹರಿಜನ ನೌಕರರು ಎರಡು ರೂಪಾಯಿ ದುರ್ವ್ಯವಹಾರ ಮಾಡಿದ್ದರೂ ಡಿಸ್‌ಮಿಸ್ ಮಾಡುತ್ತೀರಿ. ಕೋಟಿಗಟ್ಟಲೆ ಅವ್ಯವಹಾರ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದೆ ಸರ್ಕಾರ ರಕ್ಷಣೆ ಮಾಡುವುದಕ್ಕೆ ಹೊರಟಿದೆಯೋ ಎಂದು ಕೇಳುತ್ತೇನೆ.